[2023] 5 ಎಸ್. ಸಿ. ಆರ್ 354

ಸರ್ವೋಚ್ಚ ನ್ಯಾಯಾಲಯ ವರದಿಗಳು

ಶ್ರೀ ಗುಲಾಮ ಮುಸ್ತಫಾ

ವಿರುದ್ಧ

ಕರ್ನಾಟಕ ರಾಜ್ಯ ಮತ್ತು ಇತರರು

(2023ರ ಕ್ರಿಮಿನಲ್ ಮೇಲ್ಮನವಿ ಸಂಖ್ಯೆ 1452)

ಮೇ 10, 2023

[ದಿನೇಶ್ ಮಹೇಶ್ವರಿ ಮತ್ತು

ಅಹ್ಸಾನುದ್ದೀನ್ ಅಮಾನುಲ್ಲಾ, ನ್ಯಾಯಮೂರ್ತಿಗಳು]

ನ್ಯಾಯದಾನದ ಪ್ರಕ್ರಿಯೆ – ಕಾನೂನು ಪ್ರಕ್ರಿಯೆ ದುರುಪಯೋಗ – ಭೂಮಿಗೆ ಸಂಬಂಧಿಸಿದ ಸಿವಿಲ್ ವಿವಾದಕ್ಕೆ ಅಪರಾಧದ ಬಣ್ಣವನ್ನು ನೀಡಿರುವುದು – ತೀರ್ಮಾನಿಸಿರುವುದೇನೆಂದರೆ: - ಪ್ರಶ್ನಾರ್ಹವಾದ ಭೂಮಿಯ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ವಿವಾದವನ್ನು ಪ್ರಾರಂಭಿಸುವಲ್ಲಿ ವಿವರಣೆಯಿಲ್ಲದ 60 ವರ್ಷಗಳ ವಿಳಂಬವಿದೆ – ಸಿವಿಲ್ ಮೊಕದ್ದಮೆಗಳಲ್ಲಿ ಪರಿಹಾರ ಪಡೆಯಲು ವಿಫಲವಾದ ನಂತರವೇ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲಾಗಿದೆ ಮತ್ತು 2ನೇ ಎದುರುದಾರಳಿಗೆ / ಆಕೆಯ ಕುಟುಂಬ ಸದಸ್ಯರಿಗೆ ಮಧ್ಯಂತರ ಪರಿಹಾರ ನಿರಾಕರಣೆ ಮಾಡಲಾಗಿದೆ - ಹೀಗಾಗಿ, ಪರೋಕ್ಷ ಕಾರಣಗಳಿಗಾಗಿ ಮತ್ತು ಪ್ರತೀಕಾರಕ್ಕಾಗಿ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಯಿತು - ಇದಲ್ಲದೆ, ಆರೋಪಗಳನ್ನು ಅವುಗಳ ಮುಖಬೆಲೆಯ ಮೇಲೆ ತೆಗೆದುಕೊಂಡರೂ ಸಹ, ಮೇಲ್ಮನವಿದಾರ ಎಸ್ಸಿ/ಎಸ್ಟಿ ಕಾಯ್ದೆಯಡಿ ಯಾವುದೇ ಅಪರಾಧವನ್ನು ಮಾಡಿದ್ದಾನೆಂದು ಹೇಳಲಾಗುವುದಿಲ್ಲ – ದೂರು ಮತ್ತು ಎಫ್.ಐ.ಆರ್. ಕ್ಷುಲ್ಲಕ , ಕಿರಿಕಿರಿ ಮತ್ತು ದಬ್ಬಾಳಿಕೆಯದ್ದಾಗಿದೆ – ಉಚ್ಚ ನ್ಯಾಯಾಲಯವು ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ.482ರ ಅಡಿಯಲ್ಲಿ ತನ್ನ ಸಂಪೂರ್ಣ ಅಧಿಕಾರವನ್ನು ಚಲಾಯಿಸದಿರುವಲ್ಲಿ ತಪ್ಪು ಎಸಗಿದೆ - ಮೇಲ್ಮನವಿದಾರರಿಗೆ ಸಂಬಂಧಿಸಿದಂತೆ ಎಫ್.ಐ.ಆರ್ ಮತ್ತು ಅದರಿಂದ ಹೊರಹೊಮ್ಮುವ ಯಾವುದೇ ಪ್ರಕ್ರಿಯೆಗಳನ್ನು ರದ್ದು ಪಡಿಸಲಾಗಿದೆ – ಕ್ರಿಮಿನಲ್ ಪ್ರೊಸೀಜರ್ ಕೋಡ್ 1973 – ಕಲಂ. 482 – ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ, 1989 – ಭಾರತೀಯ ದಂಡ ಸಂಹಿತೆ, 1860.

ಕ್ರಿಮಿನಲ್ ಪ್ರೊಸೀಜರ್ ಕೋಡ್ 1973 – ಕಲಂ.482 - ಎಫ್.ಐ.ಆರ್. ಅನ್ನು ರದ್ದುಗೊಳಿಸುವುದು – ಅದರ ವ್ಯಾಪ್ತಿ - ಚರ್ಚಿಸಲಾಗಿದೆ.

ಕ್ರಿಮಿನಲ್ ಪ್ರೊಸೀಜರ್ ಕೋಡ್ 1973 – ಕಲಂ.482 - ವಿಶೇಷ ಕಾನೂನಿನ ಅಡಿಯಲ್ಲಿನ ಎಫ್.ಐ.ಆರ್. ಅನ್ನು ರದ್ದುಪಡಿಸುವುದು –

ತೀರ್ಮಾನಿಸಿರುವುದೇನೆಂದರೆ: ಅಪರಾಧವು 'ವಿಶೇಷ ಶಾಸನ' ದ ವ್ಯಾಪ್ತಿಗೆ ಒಳಪಟ್ಟಿದೆ ಎಂಬ ಮಾತ್ರಕ್ಕೆ ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯವು ಸಂವಿಧಾನದ 142ನೇ ವಿಧಿ ಅಥವಾ , ಸಿ. ಆರ್. ಪಿ. ಸಿ. ಕಲಂ. 482ಗಳ ಅಡಿಯಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸುವುದನ್ನು ತಡೆಯುವುದಿಲ್ಲ – ಭಾರತದ ಸಂವಿಧಾನ – ಅನುಛ್ಛೇದ 142 – ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯತಡೆ) ಕಾಯ್ದೆ, 1989.

ಕ್ರಿಮಿನಲ್ ನ್ಯಾಯಾಡಳಿತ – ಎಫ್.ಐ.ಆರ್. –ಕಠಿಣ ಕಾನೂನುಗಳ ನಿಬಂಧನೆಗಳನ್ನು ಆಹ್ವಾನಿಸುವುದು – ಅಧಿಕಾರಿಗಳ ಕರ್ತವ್ಯ – ತೀರ್ಮಾನಿಸಿರುವುದೇನೆಂದರೆ: - ಯಾವುದೇ ದೂರಿನ ಆಧಾರದ ಮೇಲೆ ಎಫ್.ಐ.ಆರ್. ದಾಖಲಿಸುವ ಅಧಿಕಾರಿಗಳು ಆರೋಪಿ ಮೇಲೆ ಗಂಭೀರ ದಂಡನಾತ್ಮಕ ಪರಿಣಾಮಗಳನ್ನು ವಿಧಿಸುವಂತಹ ಎಸ್ಸಿ/ಎಸ್ಟಿ ಕಾಯ್ದೆಯಂತಹ ಕಠಿಣ ಕಾನೂನುಗಳ ನಿಬಂಧನೆಗಳನ್ನು ಅನ್ವಯಿಸುವ ಮೊದಲು ಬಹಳ ಜಾಗರೂಕರಾಗಿರಬೇಕು. - ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ, 1989 – ಕ್ರಿಮಿನಲ್ ಕಾನೂನುಗಳು.

ಮೇಲ್ಮನವಿಗೆ ಅನುಮತಿ ನೀಡಿದ ನ್ಯಾಯಾಲಯ ತೀರ್ಮಾನಿಸಿರುವುದೇನೆಂದರೆ:

1.1 ಅಪರಾಧವು 'ವಿಶೇಷ ಶಾಸನ' ದ ವ್ಯಾಪ್ತಿಗೆ ಒಳಪಟ್ಟಿದೆ ಎಂಬ ಕೇವಲ ಸಂಗತಿಯು ಈ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯವು ಸಂವಿಧಾನದ ಅನುಛ್ಛೇದ 142 ಅಥವಾ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 482ರ ಅಡಿಯಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸುವುದನ್ನು ತಡೆಯುವುದಿಲ್ಲ. [ಖಂಡಿಕೆ 34] [369-ಸಿ-ಡಿ]

1.2 ಎಫ್.ಐ.ಆರ್. ವಿವರವಾದದ್ದಾಗಿರಬೇಕಾಗಿಲ್ಲ, ಏಕೆಂದರೆ ಇದು ತನಿಖಾ ಪ್ರಕ್ರಿಯೆನ್ನು ಪ್ರಾರಂಭಿಸಲು ಮಾತ್ರ ಮತ್ತು ಪೊಲೀಸರಿಗೆ ಸಾಮಾನ್ಯವಾಗಿ ತನಿಖೆ ನಡೆಸಲು ಅವಕಾಶ ನೀಡಲು ಬೇಕು. ಇದು ಸಾಮಾನ್ಯ ನಿಯಮವಾಗಿದೆ, ಆದರೆ ಸೂಕ್ತವಾದ ಪ್ರಕರಣದಲ್ಲಿ ಈ ನ್ಯಾಯಾಲಯ ಅಥವಾ ಉಚ್ಚನ್ಯಾಯಾಲಯಕ್ಕೆ ಇದರ ನಿರ್ಬಂಧವಲ್ಲ. [ಖಂಡಿಕೆ 35] [370-ಡಿ-ಇ]

ಪೊಲೀಸ್ ಅಧೀಕ್ಷಕ ಸಿಬಿಐ ವರ್ಸಸ್ ತಪನ್ ಕುಮಾರ್ ಸಿಂಗ್, (2003) 6 ಎಸ್ಸಿಸಿ175:[2003] 3 ಎಸ್. ಸಿ. ಆರ್. 485; ಉತ್ತರ ಪ್ರದೇಶ ರಾಜ್ಯ ವಿರುದ್ಧ ನರೇಶ್, (2011) 4 ಎಸ್. ಸಿ. ಸಿ. 324:[2011] 4 ಎಸ್.ಸಿ. ಆರ್. 1176- ಗಳನ್ನು ಅವಲಂಬಿಸಲಾಗಿದೆ.

1.3 ಈ ನ್ಯಾಯಾಲಯವು ಭೂಮಿ ಮತ್ತು /ಅಥವಾ ಹಣಕ್ಕೆ ಸಂಬಂಧಿಸಿದ ಸಂಪೂರ್ಣವಾಗಿ ಸಿವಿಲ್ ವಿವಾದಗಳಿಗೆ, ಅಪರಾಧದ ಬಣ್ಣವನ್ನು ನೀಡಲಾಗುತ್ತಿರುವಂತಹ ಪ್ರಕರಣಗಳಲ್ಲಿ ಮಧ್ಯಪ್ರವೇಶಿಸುವುದರಲ್ಲಿ ಬಹುತೇಕ ಸ್ಥಿರವಾಗಿದೆ. ಈ ಪ್ರಕರಣ ಸಂಬಂಧಿತ ಪಕ್ಷಗಾರನ ಮೇಲೆ ನ್ಯಾಯಾಂಗೇತರ ಒತ್ತಡವನ್ನು ಹೇರುವ ಉದ್ದೇಶಕ್ಕಾಗಿ ಮಾತ್ರ, ಇದು ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗವಲ್ಲದೆ ಬೇರೇನೂ ಅಲ್ಲ. ಪ್ರಸ್ತುತ ಪ್ರಕರಣದಲ್ಲಿ,

ಪ್ರಶ್ನಾರ್ಹವಾದ ಭೂಮಿಯ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ವಿವಾದವನ್ನು ಪ್ರಾರಂಭಿಸುವಲ್ಲಿ 60 ವರ್ಷಗಳಷ್ಟು ದೊಡ್ಡ ಮತ್ತು ವಿವರಿಸಲಾಗದ ವಿಳಂಬವಾಗಿದೆ, ಮತ್ತು ಸಿವಿಲ್ ಮೊಕದ್ದಮೆಗಳಲ್ಲಿ ಎದುರುದಾರಯು ಪರಿಹಾರ ಪಡೆಯಲು ವಿಫಲವಾದ ನಂತರವೇ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲಾಗಿದೆ, ಜೊತೆಗೆ 2ನೇ ಎದುರುದಾರ /ಆಕೆಯ ಕುಟುಂಬದ ಸದಸ್ಯರಿಗೆ ಮಧ್ಯಂತರ ಪರಿಹಾರದ ನಿರಾಕರಣೆ ಮಾಡಲಾಗಿದೆ. ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯದಲ್ಲಿ, ಪರೋಕ್ಷ ಉದ್ದೇಶಗಳೊಂದಿಗೆ, ಪರೋಕ್ಷ ಕಾರಣಗಳಿಗಾಗಿ ಮತ್ತು ಪ್ರತೀಕಾರದ ಸ್ಪಷ್ಟ ಗುರಿಯನ್ನು ಹೊಂದಿ ಕ್ರಿಮಿನಲ್ ಮೂಕದ್ದಮೆಗಳಿಗೆ ಈಗ ಶರಣುಹೋಗಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಆರೋಪಗಳನ್ನು ಅವುಗಳ ಮುಖಬೆಲೆಯ ಮೇಲೆ ನಿಜವೆಂದು ಪರಿಗಣಿಸಿದರೂ ಕೂಡಾ, ಮೇಲ್ಮನವಿದಾರರ ವಿರುದ್ಧ ಎಸ್ಸಿ/ಎಸ್ಟಿ ಕಾಯೆ ಯಡಿ ಯಾವುದೇ ಅಪರಾಧವನ್ನು ಹೊರಿಸಲಸಾಧ್ಯ. ದೂರು ಮತ್ತು ಎಫ್.ಐ.ಆರ್.ಗಳು ಕ್ಪುಲ್ಲಕ, ನೋವುಂಟುಮಾಡುವ ಮತ್ತು ದಬ್ಬಾಳಿಕೆಯದ್ದಾಗಿವೆ. [ಖಂಡಿಕೆ 36,37] [370-ಇ-ಎಚ್]

1.4 ಯಾವುದೇ ದೂರಿನ ಆಧಾರದ ಮೇಲೆ ಎಫ್.ಐ.ಆರ್. ಅನ್ನು ದಾಖಲಿಸುವ ಅಧಿಕಾರಿಗಳು, ಎಸ್ಸಿ/ಎಸ್ಟಿ ಕಾಯ್ದೆಯಂತಹ ಅತ್ಯಂತ ಕಠಿಣವಾದ ಕಾನೂನಿನ ಯಾವುದೇ ನಿಬಂಧನೆಯನ್ನು ಅನ್ವಯಿಸುವ ಮೊದಲು ಜಾಗರೂಕರಾಗಿರಲು ಕರ್ತವ್ಯಬದ್ದರಾಗಿದ್ದಾರೆ. ಇದು ಸಂಬಂಧಿತ ಆರೋಪಿ ಮೇಲೆ ಗಂಭೀರ ದಂಡನೆಯನ್ನು ವಿಧಿಸುತ್ತದೆ. ತಾನು ಆಹ್ವಾನಿಸಲು ಬಯಸುವ ನಿಬಂಧನೆಗಳು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುತ್ತವೆ ಎಂದು ಅಧಿಕಾರಿಗೆ ಮನವರಿಕೆಯಾಗಬೇಕು. [ಖಂಡಿಕೆ 38] [371-ಎ-ಬಿ]

1.5 ಉಚ್ಚ ನ್ಯಾಯಾಲಯವು ಎಫ್.ಐ.ಆರ್. ರದ್ದು ಮಾಡದೇ ಸಂಹಿತೆಯ ಕಲಂ 482ರಅಡಿಯಲ್ಲಿ ತನ್ನ ಸಂಪೂರ್ಣ ಅಧಿಕಾರವನ್ನು ಚಲಾಯಿಸದೇ ಇರುವುದು ತಪ್ಪಾಗಿದೆ. ಆಕ್ಷೇಪಾರ್ಹ ತೀರ್ಪನ್ನು ಕಾನೂನಿನಲ್ಲಿ ಒಪ್ಪಲಾಗದ ಕಾರಣ ತಳ್ಳಿಹಾಕಲಾಗಿದೆ. ಮೇಲ್ಮನವಿದಾರದಾರನಿಗೆ ಸಂಬಂಧಿಸಿದಂತೆ, ಎಫ್.ಐ.ಆರ್. ಮತ್ತು ಅದರಿಂದ ಹೊರಹೊಮ್ಮುವ ಯಾವುದೇ ವ್ಯವಹರಣೆಗಳನ್ನು ರದ್ದುಗೊಳಿಸಲಾಗಿದೆ. [ಖಂಡಿಕೆ 39] [371-ಸಿ-ಡಿ]

ಹರಿಯಾಣರಾಜ್ಯ ವರ್ಸಸ್ ಭಜನ್ಲಾಲ್
1992 ಸಪ್ಲಿಮೆಂಟ್ (1) ಎಸ್. ಸಿ. ಸಿ. 335 :[1990] 3 ಸಪ್ಲಿಮೆಂಟ್ .ಎಸ್. ಸಿ. ಆರ್. 259;

ಎಸ್. ಡಬ್ಲ್ಯೂ. ಪಳನಿತ್ಕರ್ ವರ್ಸಸ್ ಸ್ಟೇಟ್ ಆಫ್ ಬಿಹಾರ
(2002) 1 ಎಸ್. ಸಿ. ಸಿ. 24;

ಕರ್ನಾಟಕ ರಾಜ್ಯ ವಿರುದ್ಧ ಎಂ. ದೇವೇಂದ್ರಪ್ಪ
(2002) 3 ಎಸ್ಸಿಸಿ 89 : [2002] 1 ಎಸ್ಸಿಆರ್ 275;

ಉಮಾಶಂಕರ್ ಗೋಪಾಲಿಕಾ ವಿರುದ್ಧ ಬಿಹಾರ ರಾಜ್ಯ
(2005) 10 ಎಸ್. ಸಿ. ಸಿ. 336;

ಪರ್ಬತ್ಭಾಯ್ಅಹಿರ್ ವಿರುದ್ಧ ಗುಜರಾತ್ ರಾಜ್ಯ
(2017) 9 ಎಸ್. ಸಿ. ಸಿ. 641:[2017] 10 ಎಸ್ಸಿಆರ್ 12;

ತೆಲಂಗಾಣರಾಜ್ಯ ವರ್ಸಸ್ ಬೀಬ್ ಅಬ್ದುಲ್ಲಾ ಜೀಲಾನಿ
(2017) 2 ಎಸ್ಸಿಸಿ779:[2017] 1ಎಸ್ಸಿಆರ್ 141;

ವಿನೋದ್ ನಟೇಶನ್ ವರ್ಸಸ್ ಕೇರಳ ರಾಜ್ಯ
(2019) 2 ಎಸ್ಸಿಸಿ 401;

ಕಮಲ್ ಶಿವಾಜಿ ಪೋಕರ್ನೇಕರ್ ವರ್ಸಸ್ ಮಹಾರಾಷ್ಟ್ರರಾಜ್ಯ
(2019) 14 ಎಸ್ಸಿಸಿ 350;

ಮಹೇಂದ್ರ ಕೆ ಸಿ ವರ್ಸಸ್ ಕರ್ನಾಟಕರಾಜ್ಯ
2021 ಎಸ್. ಸಿ. ಸಿ. ಆನ್ಲೈನ್ಎಸ್. ಸಿ. 1021;

ಅರ್ನಬ್ ಮನೋರಂಜನ್ ಗೋಸ್ವಾಮಿ ವರ್ಸಸ್ ಮಹಾರಾಷ್ಟ್ರ ರಾಜ್ಯ
(2021) 2 ಎಸ್ಸಿಸಿ 427;

ನೀಹಾರಿಕಾ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ವರ್ಸಸ್ ಸ್ಟೇಟ್ ಆಫ್ ಮಹಾರಾಷ್ಟ್ರ
2021 ಎಸ್. ಸಿ. ಸಿ. ಆನ್ಲೈನ್ ಎಸ್. ಸಿ. 325;

ರಾಮಾವತಾರ್ ವರ್ಸಸ್ ಮಧ್ಯ ಪ್ರದೇಶ ರಾಜ್ಯ
2021 ಎಸ್. ಸಿ. ಸಿ. ಆನ್ಲೈನ್ ಎಸ್. ಸಿ. 966;

- <u>ಇವುಗಳ ಮೇಲೆ ಅವಲಂಬಿತವಾಗಿದೆ.</u>

ಗೋವಿಂದ ಪ್ರಸಾದ್ ಕೇಜ್ರಿವಾಲ್ ವರ್ಸಸ್ ಬಿಹಾರ ರಾಜ್ಯ
(2020) 16 ಎಸ್. ಸಿ. ಸಿ. 714;

ಪೊಲೀಸ್ಆಯುಕ್ತ ವರ್ಸಸ್ ದೇವೇಂದ್ರ ಆನಂದ್
2019 ಎಸ್. ಸಿ. ಸಿ. ಆನ್ಲೈನ್ಎಸ್. ಸಿ. 966;

ಬಿನೋದ್ಕುಮಾರ್ ವರ್ಸಸ್ ಬಿಹಾರರಾಜ್ಯ
(2014) 10 ಎಸ್. ಸಿ. ಸಿ663:[2014] 11 ಎಸ್ಸಿಆರ್ 85;

ಇಂಡಿಯನ್ ಆಯಿಲ್ ಕಾರ್ಪೊರೇಷನ್ ವರ್ಸಸ್ ಎನ್ಇಪಿಸಿ ಇಂಡಿಯಾ ಲಿಮಿಟೆಡ್
(2006) 6 ಎಸ್ಸಿಸಿ736:[2006] 3 ಪೂರಕ.ಎಸ್. ಸಿ. ಆರ್. 704;

ಜಿ. ಸಾಗರ್ಸೂರಿ ವಿರುದ್ಧ ಉತ್ತರ ಪ್ರದೇಶ ರಾಜ್ಯ
(2000) 2 ಎಸ್. ಸಿ. ಸಿ636:[2000] 1ಎಸ್. ಸಿ. ಆರ್ 417;

ಮಧ್ಯಪ್ರದೇಶ ರಾಜ್ಯ ವಿರುದ್ಧ ಸುರೇಂದ್ರ ಕೋರಿ
(2012) 10 ಎಸ್ಸಿಸಿಎ 155 :[2012] 8 ಎಸ್ಸಿಆರ್ 858;

ದಿನೇಶ್ಭಾಯಿ ಚಂದು ಭಾಯಿ ಪಟೇಲ್ ವಿರುದ್ಧ ಗುಜರಾತ್ ರಾಜ್ಯ
(2018) 3 ಎಸ್. ಸಿ. ಸಿ. 104:[2018] 1ಎಸ್ಸಿಆರ್62;

ಸತ್ವಿಂದರ್ ಕೌರ್ ವರ್ಸಸ್ ರಾಜ್ಯ (ದೆಹಲಿಯ ಎನ್. ಸಿ. ಟಿ. ಸರ್ಕಾರ)
(1999) 8 ಎಸ್. ಸಿ. ಸಿ728:[1999] 3 ಪೂರಕ.ಎಸ್. ಸಿ. ಆರ್. 328;

ಪಿ ಚಿದಂಬರಂ ವರ್ಸಸ್ ಜಾರಿ ನಿರ್ದೇಶನಾಲಯ
(2019) 9 ಎಸ್ಸಿಸಿ24:[2019] 12 ಎಸ್ಸಿಆರ್ 172;

ಸ್ಕೋಡಾ ಆಟೋ ವೋಕ್ಸ್ವ್ಯಾಗನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ವರ್ಸಸ್ ಉತ್ತರ ಪ್ರದೇಶ ರಾಜ್ಯ
(2021) 5 ಎಸ್ಸಿಸಿ 795;

ಯೂನಿಯನ್ ಆಫ್ ಇಂಡಿಯಾ ವರ್ಸಸ್ ಪ್ರಕಾಶ್ ಪಿ ಹಿಂದೂಜಾ
(2003) 6 ಎಸ್. ಸಿ. ಸಿ195 : [2003] 1 ಪೂರಕ ಎಸ್ಸಿಆರ್ 307

- ಇವುಗಳನ್ನು ಉಲ್ಲೇಖಿಸಲಾಗಿದೆ.

ಪ್ರಕರಣದ ಕಾನೂನು ಉಲ್ಲೇಖ

[2014] 11 ಎಸ್ಸಿಆರ್ 85	ಉಲ್ಲೇಖಿಸಲಾಗಿದೆ	ಪ್ಯಾರಾ 15
[2006] 3 ಪೂರಕ ಎಸ್ಸಿಆರ್ 704	ಉಲ್ಲೇಖಿಸಲಾಗಿದೆ	ಪ್ಯಾರಾ 15
[2000] 1 ಎಸ್ಸಿಆರ್ 417	ಉಲ್ಲೇಖಿಸಲಾಗಿದೆ	ಪ್ಯಾರಾ 15
[2012] 8 ಎಸ್ಸಿಆರ್ 858	ಉಲ್ಲೇಖಿಸಲಾಗಿದೆ	ಪ್ಯಾರಾ 21
[2018] 1 ಎಸ್ಸಿಆರ್ 62	ಉಲ್ಲೇಖಿಸಲಾಗಿದೆ	ಪ್ಯಾರಾ 21
[1999] 3 ಪೂರಕ ಎಸ್. ಸಿ. ಆರ್. 348	ಉಲ್ಲೇಖಿಸಲಾಗಿದೆ	ಪ್ಯಾರಾ 21
[2019] 12 ಎಸ್. ಸಿ. ಆರ್. 172	ಉಲ್ಲೇಖಿಸಲಾಗಿದೆ	ಪ್ಯಾರಾ 21
[2003] 1ಸಪ್ಲ ಎಸ್. ಸಿ. ಆರ್. 307	ಉಲ್ಲೇಖಿಸಲಾಗಿದೆ	ಪ್ಯಾರಾ 21
[2003] 3 ಎಸ್ಸಿಆರ್ 485	ಅವಲಂಬಿಸಿದೆ	ಪ್ಯಾರಾ 22
[2011] 4 ಎಸ್ಸಿಆರ್ 1176	ಅವಲಂಬಿಸಿದೆ	ಪ್ಯಾರಾ 22
[1990] 3 ಪೂರಕ ಎಸ್ಸಿಆರ್ 259	ಅವಲಂಬಿಸಿದೆ	ಪ್ಯಾರಾ 26
[2002] 1 ಎಸ್ಸಿಆರ್ 275	ಅವಲಂಬಿಸಿದೆ	ಪ್ಯಾರಾ 28
[2017] 10 ಎಸ್ಸಿಆರ್ 12	ಅವಲಂಬಿಸಿದೆ	ಪ್ಯಾರಾ 30
[2017] 1ಎಸ್ಸಿಆರ್ 141	ಅವಲಂಬಿಸಿದೆ	ಪ್ಯಾರಾ 30

<u>ಕ್ರಿಮಿನಲ್ ಮೇಲ್ಮನವಿ ತೀರ್ಪು:</u> ಕ್ರಿಮಿನಲ್ ಮೇಲ್ಮನವಿ ಸಂ 1452/2023

ಸಿ.ಆರ್.ಎಲ್.ಪಿ. ಸಂಖ್ಯೆ 3788/2019ರಲ್ಲಿ ದಿನಾಂಕ: 23.02.2021 ರ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇದರ ತೀರ್ಪು ಮತ್ತು ಆದೇಶದಿಂದ ಉದ್ಭವಿಸಿರುತ್ತೆ.

ದೇವದತ್ ಕಾಮತ್, ಹಿರಿಯ ಅಡ್ವೊಕೇಟ್, ನಿಜಾಂ ಪಾಷಾ, ಲಝೀರ್ ಅಹ್ಮದ್ ಬಿ.ಎಫ್., ಸಿದ್ಧಾರ್ಥ ಕೌಶಿಕ್, ಶಿವೇಂದ್ರ ಪಾಂಡೆ, ರಾಜೇಶ್ ಇನಾಮ್ದಾರ್, ಅನುಭವ್ ಕುಮಾರ್, ಇಸ್ಮಾಯಿಲ್ ಜಬಿಯುಲ್ಲಾ, ಅಡ್ವೊಕೇಟ್ಸ್ಗಳು ಮೇಲ್ಮನವಿದಾರರಿಗಾಗಿ.

ಶುಭ್ರಾಂಶು ಪಾಧಿ, ವಿಶಾಲ್ ಬನ್ಸಾಲ್, ನಿರೂಪ್ ಸುಕೃತಿ, ಜೈ ನಿರುಪಮ್, ಮಹೇಶ್ ಠಾಕೂರ್, ಮಿಸ್. ಶಿವಾನಿ, ಶ್ರೀಮತಿ ಗೀತಾಂಜಲಿ ಬೇಡಿ, ಶ್ರೀಮತಿ ವಿಪಾಶಾ ಸಿಂಗ್, ಅಡ್ವಕೇಟ್ ಗಳು ಎದುರುದಾರಗಳಿಗಾಗಿ.

ನ್ಯಾಯಾಲಯದ ತೀರ್ಪನ್ನು ನೀಡಿದವರು:

ಅಹ್ಸಾನುದ್ದೀನ್ ಅಮಾನುಲ್ಲಾ, ನ್ಯಾಯಮೂರ್ತಿಗಳು

ಮೇಲ್ಮನವಿದಾರ , ಎದುರುದಾರ ನಂ.1 ಮತ್ತು ಎದುರುದಾರ ನಂ.2 ರವರ ವಿದ್ವತ್ಪೂರ್ಣ ವಕೀಲರ ವಾದಮಂಡನೆಯನ್ನು ಆಲಿಸಲಾಯಿತು.

2. ಅನುಮತಿ ನೀಡಲಾಗಿದೆ.

3. ಪ್ರಸ್ತುತ ಕ್ರಿಮಿನಲ್ ಮೇಲ್ಮನವಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರುರವರು ನೀಡಿದ ಅಂತಿಮ ತೀರ್ಪು ಮತ್ತು ಆದೇಶದ ವಿರುದ್ಧ ನಿರ್ದೇಶಿಸಲಾಗಿದೆ (ಇನ್ನು ಮುಂದೆ ಇದನ್ನು "ಆಕ್ಷೇಪಿತ ತೀರ್ಪು" ಎಂದು ಕರೆಯಲಾಗುತ್ತದೆ), ಆ ಮೂಲಕ ಮೇಲ್ಮನವಿದಾರ ಸಲ್ಲಿಸಿದ್ದ 2019ರ ಕ್ರಿಮಿನಲ್ ಅರ್ಜಿ ಸಂಖ್ಯೆ 3788ನ್ನು ಉಚ್ಚ ನ್ಯಾಯಾಲಯವು ತಿರಸ್ಕರಿಸಿರುತ್ತೆ.

ವಾಸ್ತವಾಂಶಃ

4. ಮೇಲ್ಮನವಿದಾರ ಜಿ ಎಂ ಇನ್ವೆಸ್ಟ್ಮೆಂಟ್ ಡೆವಲ್ಲಿಂಗ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ (ಇನ್ನು ಮುಂದೆ ಇದನ್ನು "ಜಿಎಂಐಡಿ" ಎಂದು ಕರೆಯಲಾಗುತ್ತದೆ) ನ ವ್ಯವಸ್ಥಾಪಕ ನಿರ್ದೇಶಕಾಗಿರುತ್ತಾರೆ. ಈ ಕಂಪನಿ ವಸತಿ ಆಸ್ತಿಗಳನ್ನು ಅಭಿವೃದ್ಧಿಪಡಿಸುವಲ್ಲಿ ತೊಡಗಿದೆ ಎಂದು ಹೇಳಲಾಗುತ್ತದೆ. ಬೆಂಗಳೂರು ಜಿಲ್ಲೆ ಜೋಡಿಮಲ್ಲಸಂದ್ರ ಗ್ರಾಮದಲ್ಲಿ ಸರ್ವೇ ಸಂಖ್ಯೆ 83ರ ಭೂಮಿಯನ್ನು ಹೊಂದಿರುವ ಕಂಪನಿ ಮತ್ತು ಮಾಲೀಕರು (ಶ್ರೀ ಎ. ಹಫೀಜ್ ಖಾನ್ ಅವರ ಉತ್ತರಾಧಿಕಾರಿಗಳು) 17.08.2009 ನಲ್ಲಿ ಜಂಟಿ ಅಭಿವೃದ್ಧಿ ಒಪ್ಪಂದ (ಇನ್ನು ಮುಂದೆ ಇದನ್ನು "ಜೆಡಿಎ" ಹೇಳಿದರು ಕರೆಯಲಾಗುತ್ತದೆ) ಮಾಡಿಕೊಂಡರು. 2017ರಲ್ಲಿ, ಜೆಡಿಎ ಅಡಿಯಲ್ಲಿ ಪರಿಗಣಿಸಲಾದ ಅಪಾರ್ಟ್ಮೆಂಟ್ ಯೋಜನೆಯನ್ನು ಪೂರ್ಣಗೊಳಿಸಲಾಯಿತು ಮತ್ತು ಹಂಚಿಕೆದಾರರ ಪರವಾಗಿ ಮಾರಾಟ ಪತ್ರಗಳನ್ನು ಬರೆದುಕೊಡಲಾಯಿತು.

5. ಭೂಮಿಯ ಮೇಲಿನ ಮಾಲೀಕತ್ವವನ್ನು ಮೂಲ ಭೂಮಾಲೀಕರು ಕ್ಲೇಮು ಮಾಡಿದ್ದು ಆ ಭೂಮಿಯ ಕುರಿತು ಕ್ರಯಪತ್ರವನ್ನು; ವಿಷೇಷ ಜಿಲ್ಲಾಧಿಕಾರಿಗಳು, ಇನಾಂ ರದ್ದಿಯಾತಿ, ಬೆಂಗಳೂರು ರವರಲ್ಲಿನ ಪ್ರಕರಣ ಸಂ.86/1959-60ರಲ್ಲಿ ದಿನಾಂಕ 09.07.1961 ರಲ್ಲಿನ ಆದೇಶ; ಶ್ರೀ ಎ. ಹಫೀಜ್ ಖಾನ್ ಅವರ ಉತ್ತರಾಧಿಕಾರಿಗಳ ಹೆಸರಿನಲ್ಲಿ ಖಾತೆ ಬದಲಾವಣೆ ಆಗಿ ಸರ್ವೆ ನಂ.83/1 ಮತ್ತು 83/2 (ಹಳೇ ಸರ್ವೆ ನಂ.8 ಹೊಸ ಸರ್ವೆ ನಂ.83) ಎಂದಿರುವ ಕಂದಾಯ ದಾಖಲೆಗಳ ನೆಲೆಗಟ್ಟಿನಲ್ಲಿ ಭೂಮಿಯ ಮೇಲೆ ಮಾಲೀಕತ್ವವನ್ನು ಮೂಲ ಭೂಮಾಲೀಕರು ಕ್ಲೇಮು ಮಾಡಿದರು. ಜೆಡಿಎ ನಂತರ ಭೂಮಾಲೀಕರು ಭೂಮಿಯ ಬಳಕೆಯನ್ನು ಕೃಷಿಯಿಂದ ಕೃಷಿಯೇತರಕ್ಕೆ ಬದಲಾಯಿಸಿದರು ಮತ್ತು ಸಂಬಂದಪಟ್ಟ ವಿವಿಧ ಇಲಾಖೆಗಳಿಂದ ಅಗತ್ಯವಾದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದನಂತರ, ಮಂಜೂರಾದ ನಕ್ಷೆ ಮತ್ತು ಕಟ್ಟಡ ಪರವಾನಗಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ (ಇನ್ನುಮುಂದೆ "ಬಿಬಿಎಂಪಿ" ಎಂದು ಕರೆಯಲಾಗುತ್ತದೆ), ನಿರ್ಮಾಣ ಪ್ರಾರಂಭವಾಗುವ ಮೊದಲು ಪಡೆದರು.

6. ದಿವಂಗತ ಬೈಲಪ್ಪನ ಮಗನಾದ ವೆಂಕಟೇಶನು ಹಳೆಯ ಸರ್ವೆ 83ರ ಮಾಲೀಕನಾಗಿದ್ದನು ಮತ್ತು ಅವನ ಆಸ್ತಿಗೆ ಹೊಸ ಸರ್ವೆ ಸಂಖ್ಯೆ 80/1 ಮತ್ತು 80/3 ಎಂದು ನಿಯೋಜಿಸಲಾಗಿತ್ತು ಮತ್ತು ಅಂತಹ ಬದಲಾವಣೆಯಿಂದಾಗಿ, ಹೊಸ ಸರ್ವೆ ಸಂಖ್ಯೆ 83 ಆಗಿರುವುದರಿಂದ, ವೆಂಕಟೇಶನು ಹೊಸ ಸರ್ವೆ ಸಂಖ್ಯೆ 83ರ ಭೂಮಿಯ ಮೇಲೆ ಹಕ್ಕು ಮಂಡಿಸಿದ್ದನು. ಇದು ಸುದೀರ್ಘವಾದ ಸಿವಿಲ್ ದಾವೆಗೆ ಕಾರಣವಾಯಿತು, ಇದರಲ್ಲಿ ವಿಶೇಷ ತಹಸೀಲ್ದಾರ್ ಮುಂದೆ ಅರ್ಜಿ; ಸಹಾಯಕ ಆಯುಕ್ತರು, ಬೆಂಗಳೂರು, ಉತ್ತರ ಉಪ ವಿಭಾಗದ ಮುಂದೆ ಮೇಲ್ಮನವಿ ಮತ್ತು; ವಿಶೇಷ ಜಿಲ್ಲಾಧಿಕಾರಿಗಳ ಆಯುಕ್ತರ ಮುಂದೆ ಮೇಲ್ಮನವಿ – ಇವೆಲ್ಲವೂ ವೆಂಕಟೇಶನ ವಿರುದ್ಧ ತೀರ್ಮಾನವಾದವು.

7. ಆದರೆ ಇವು ಇಷ್ಟಕ್ಕೇ ಮುಗಿಯುವುದಿಲ್ಲ. ಎರಡು ದಾವೆಗಳೂ ಇದ್ದವು – ಒಂದು ನ್ಯಾಯ ಸಮ್ಮತ ಭೂ-ಮಾಲೀಕರು ಸಲ್ಲಿಸಿದ ದಾವೆಯಾಗಿತ್ತು, ಅದು ಪ್ರತಿಬಂಧಕಾಜ್ಞೆಗಾಗಿ ದಾವೆಯಾಗಿತ್ತು, ಮತ್ತು ಇನ್ನೊಂದು ವೆಂಕಟೇಶನು ಸಲ್ಲಿಸಿದ ಕ್ಷುಲ್ಲಕ ದಾವೆಯಾಗಿತ್ತು (ಇದನ್ನು ಹಾಗೆ ಹೇಳಲು ನಮಗೆ ಯಾವುದೇ ಹಿಂಜರಿಕೆಯಿಲ್ಲ). ವೆಂಕಟೇಶ್ ಅವರ ದಾವೆಯಲ್ಲಿ ಯಾವುದೇ ಪರಿಹಾರ ಸಿಗದ ಕಾರಣ, ಅವರು ಇತರರೊಂದಿಗೆ, ಹೈಕೋರ್ಟ್ ಅನ್ನು ಮೇಲ್ಮನವಿಯೊಂದಿಗೆ ಸಂಪರ್ಕಿಸಿದರು, ಅದನ್ನು ಸಹ ವಜಾಗೊಳಿಸಲಾಯಿತು. ಇದಲ್ಲದೆ, ವೆಂಕಟೇಶರು ಬಿಬಿಎಂಪಿಯ ಪಟ್ಟಣ ವಿನ್ಯಾಸದ ಇಲಾಖೆಯ ಹೆಚ್ಚುವರಿ ನಿರ್ದೇಶಕರ ಮುಂದೆ ಅರ್ಜಿಸಲ್ಲಿಸಿ ಮಂಜೂರಾದ ಅನುಮೋದಿತ ನಕ್ಷೆಯನ್ನು ರದ್ದುಗೊಳಿಸಿದರು. ಜಿಎಂಐಡಿ ರಿಟ್ ಅರ್ಜಿ ಮೂಲಕ ಹೈಕೋರ್ಟ್ನ ಮುಂದೆ ರದ್ದತಿಯನ್ನು ಆಕ್ಷೇಪಿಸಿತು, ಅದು ಬಿಬಿಎಂಪಿಯ ಮೇಲ್ಮನವಿ ಸಮಿತಿಯನ್ನು ಸಂಪರ್ಕಿಸುವಂತೆ ಜಿಎಂಐಡಿ ಮತ್ತು ಮಾಲೀಕರಿಗೆ ನಿರ್ದೇಶಿಸಿತು. ಹಾಗೆ ಮಾಡಿದ ನಂತರ, ಬಿಬಿಎಂಪಿಯ ಮೇಲ್ಮನವಿ ಸಮಿತಿಯು ಆಯುಕ್ತರ ಆದೇಶದಿಂದ ರದ್ದಾಗಿದ್ದ ಅನುಮೋದಿತ ನಕ್ಷೆಯನ್ನು ಮರುಸ್ಥಾಪಿಸಿತು.

8. ನಿರ್ಮಾಣವು ಪ್ರಾರಂಭವಾಯಿತು ಮತ್ತು ಜಿ. ಎಂ. ಐ. ಡಿ. ಅಪಾರ್ಟ್ಮೆಂಟ್ಸ್‌ಳ ನಿರೀಕ್ಷಿತ ಖರೀದಿದಾರರೊಂದಿಗೆ ಮಾರಾಟ ಒಪ್ಪಂದ (ಗಳನ್ನು) ಮಾಡಿಕೊಂಡನಂತರ, ವೆಂಕಟೇಶನು ಮೇಲ್ಮನವಿದಾರರು ಮತ್ತು ಇತರರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ಪ್ರಾರಂಭಿಸಿದನು ಮತ್ತು ಅವನ ಪ್ರತಿನಿಧಿಗಳ ಮೂಲಕ, ಅವರಲ್ಲಿ ಒಬ್ಬರಾದ ಪಾರ್ವತಿರೆಡ್ಡಿಯನ್ನು ಸಹ ವೆಂಕಟೇಶನು ಸಲ್ಲಿಸಿದ ಸಿವಿಲ್ ದಾವೆಯಲ್ಲಿ ಸಿಲುಕಿಸಲಾಗಿತ್ತು. ಒ. ಎಸ್. ನಂ. 8163/2016 ಎಂಬ ಮತ್ತೊಂದು ಸಿವಿಲ್ ದಾವೆಯನ್ನು ಸಹ ಭೂಮಾಲೀಕರು ಮತ್ತು ಬಿಲ್ಡರ್ ಗಳ ವಿರುದ್ಧ ಇತರ ವ್ಯಕ್ತಿಗಳು ದಾಖಲಿಸಿದ್ದಾರೆ, ಇದು ಇಂದಿಗೂ ಬಾಕಿ ಇದೆ. ಈ ಸಿವಿಲ್ ದಾವೆಗಳನ್ನು ಜಿಎಂಐಡಿ ಮತ್ತು ಮೂಲ ಭೂಮಾಲೀಕರು ವಿವಿಧ ನ್ಯಾಯಾಲಯಗಳಲ್ಲಿ ಸಮರ್ಥಿಸಿಕೊಳ್ಳುತ್ತಿದ್ದಾಗ, ಒ. ಎಸ್. ನಂ. 8163/2016ರಲ್ಲಿನ ವಾದಿಯ ತಾಯಿ ಭಾರತೀಯ ದಂಡ ಸಂಹಿತೆ, 1860 (ಇನ್ನು ಮುಂದೆ ಇದನ್ನು "ಐಪಿಸಿ" ಎಂದು ಕರೆಯಲಾಗುತ್ತದೆ) ರ ಕಲಂ 120ಬಿ, 406, 419, 468, 471, 420, 448, 427 ಮತ್ತು ಸಹ ಕಲಂ 34ರ ಅಡಿಯಲ್ಲಿ ಕ್ರಿಮಿನಲ್ ದೂರನ್ನು ದಾಖಲಿಸಿದರು. ನಂತರ ಇದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ, 1989ರ ಕಲಂ 3(1)(15) ರ ಅಡಿಯಲ್ಲಿ ಮತ್ತು ಐಪಿಸಿ ಕಲಂ 427, 420, 419, 406, 471, 468, 448 ಮತ್ತು ಸಹ ಕಲಂ 34ರ ಅಡಿಯಲ್ಲಿ ಬೆಂಗಳೂರು ನಗರದ ಬಾಗಲ್ಗುಂಟೆ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 317/2017 ರಲ್ಲಿ ಪ್ರಥಮ ವರ್ತಮಾನ ವರದಿಯಾಗಿ (ಇನ್ನು ಮುಂದೆ "ಎಫ್ಐಆರ್" ಎಂದು ಉಲ್ಲೇಖಿಸಲಾಗುವುದು) ರೂಪಾಂತರಗೊಂಡಿದೆ. ಜಿ.ಎಂ.ಐ.ಡಿ.ಯ ವ್ಯವಸ್ಥಾಪಕ ನಿರ್ದೇಶಕ ಗುಲಾಮ್ ಮುಸ್ತಫಾ, ನಮ್ಮ ಮುಂದೆ ಮೇಲ್ಮನವಿದಾರನಿದ್ದು ಆತನನ್ನು ಎಫ್ಐಆರ್ ನಲ್ಲಿ ಆರೋಪಿ ಸಂಖ್ಯೆ 18 ಎಂದು ಕಾಣಿಸಲಾಗಿದೆ.

9. ಭೂಮಿಯ ಅಭಿವೃದ್ಧಿಗೆ ಸಂಬಂಧಿಸಿದಂತೆ, 2017ರಲ್ಲಿ ಅಪಾರ್ಟ್ಮೆಂಟ್ಸ್‌ಳ ನಿರ್ಮಾಣ ಪೂರ್ಣಗೊಂಡಿದೆ, ಆಯಾ ಹಂಚಿಕೆದಾರರ ಪರವಾಗಿ ಮಾರಾಟಪತ್ರಗಳನ್ನು ಬರೆದುಕೊಡಲಾಗಿದೆ ಮತ್ತು ನಂತರ ಈ ಹಂಚಿಕೆದಾರರು ತಮ್ಮ ಅಪಾರ್ಟ್ಮೆಂಟ್ಸ್‌ಳಲ್ಲಿ ವಾಸಿಸುತ್ತಿದ್ದಾರೆ ಎಂದು ಮೇಲ್ಮನವಿದಾರರ ಪರ ವಕೀಲರು ಹೇಳಿದ್ದಾರೆ.

10. ಮೇಲ್ಮನವಿದಾರ ಎಫ್.ಐ.ಆರ್ ನ್ನು ರದ್ದುಗೊಳಿಸುವಂತೆ ಕೋರಿ 1973ರ ಕ್ರಿಮಿನಲ್ ಪ್ರೊಸೀಜರ್ ಕೋಡ್ (ಇನ್ನುಮುಂದೆ ಇದನ್ನು "ಕೋಡ್" ಎಂದು ಕರೆಯಲಾಗುತ್ತದೆ) ನ ಕಲಂ 482ರಅಡಿಯಲ್ಲಿ ದಿನಾಂಕ 28.05.2019 ನಲ್ಲಿ ಹೈಕೋರ್ಟಿನ ಮುಂದೆ ಅರ್ಜಿಯನ್ನು ಸಲ್ಲಿಸಿದನು. ಈ ಅರ್ಜಿಯು ಕ್ರಿಮಿನಲ್ ಅರ್ಜಿ ಸಂಖ್ಯೆ 3788/2019 ಎಂದು ದಾಖಲಾಗಿದೆ ಮತ್ತು ಹೈಕೋರ್ಟ್ ದಿನಾಂಕ 07.08.2019ರ ಆದೇಶದ ಮೂಲಕ ನೋಟೀಸು ನೀಡುವಾಗ ಮೇಲ್ಮನವಿದಾರನಿಗೆ ಸಂಬಂಧಿಸಿದಂತೆ ಎಫ್ಐಆರ್ ನಲ್ಲಿನ ಮುಂದಿನ ಪ್ರಕ್ರಿಯೆಗಳನ್ನು ತಡೆಹಿಡಿಯುವ ಮಧ್ಯಂತರ ಆದೇಶ ನೀಡಿದೆ. ಆದಾಗ್ಯೂ, ಕ್ರಿಮಿನಲ್ ಅರ್ಜಿಸಂಖ್ಯೆ 3788/2019 ಮುನ್ನಡೆ ಅಂತಿಮವಾಗಿ 23.02.2021 ನಲ್ಲಿ ವಜಾಗೊಂಡಿದ್ದು, ಇದು ಈ ಮೇಲ್ಮನವಿಯನ್ನು ದಾಖಲಿಸಲು ಕಾರಣವಾಯಿತು.

<u>ಅರ್ಜಿದಾರರ ವಾದಮಂಡನೆಗಳು:</u>

11. ಮೇಲ್ಮನವಿದಾರದಾರರ ಪರ ಹಿರಿಯ ವಕೀಲರು, ವಾದಮಂಡನೆಯಲ್ಲಿ ಮೊದಲನೆಯದಾಗಿ, ಈ ವಿಷಯವು ಸಂಪೂರ್ಣವಾಗಿ ಸಿವಿಲ್ ಸ್ವರೂಪದ್ದಾಗಿದೆ, ಏಕೆಂದರೆ ಇದು ಜಿ.ಎಂ.ಐ.ಡಿ. ಯು ಜೆ.ಡಿ.ಎ. ಮಾಡಿಕೊಂಡು ಕಾನೂನು ಬದ್ಧ ಪ್ರಕ್ರಿಯೆಯನ್ನು ಅನುಸರಿಸಿ ಅಪಾರ್ಟ್ಮೆಂಟ್ಗಳನ್ನು ನಿರ್ಮಿಸಿರುವ ಭೂಮಿಯ ಹಕ್ಕುಸ್ವಾಮ್ಯ ಸಂಬಂಧಿಸಿದ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.

12. ಕಂದಾಯ ಪ್ರಾಧಿಕಾರಗಳು, ಬಿಬಿಎಂಪಿ ಸೇರಿದಂತೆ ಅನೇಕ ಪ್ರಾಧಿಕಾರಗಳು ನಿರ್ಮಾಣಕ್ಕೆ ಅಗತ್ಯವಾದ ಅನುಮತಿಗಳನ್ನು ನೀಡಿವೆ ಎಂದು ಹೇಳಿದ್ದು ಇದಲ್ಲದೆ, ಜೆಡಿಎಗೆ ಜಿಎಂಐಡಿ ಜೊತೆ ಸಹಿ ಹಾಕಿದ ಮೂಲ ಭೂಮಾಲೀಕರ ಪರವಾಗಿ ಆರಂಭಿಕ ಸಿವಿಲ್ ಮೊಕದ್ದಮೆಯನ್ನು ಸಹ ನಿರ್ಧರಿಸಲಾಗಿದೆ ಎಂದು ವಾದ ಮಂಡಿಸಿರುತ್ತಾರೆ.

13. ಎಫ್ಐಆರ್ ಗೆ ಕಾರಣವಾದ ದೂರನ್ನು ವೆಂಕಟೇಶ್ನ ಆದೇಶ ಮೇರೆಗೆ ಸಲ್ಲಿಸಲಾಗಿದೆ ಹಾಗೂ ತನ್ನ ಭೂಮಿಯ ಹಳೆಯ ಸರ್ವೆ ಸಂಖ್ಯೆಗೆ ಇಲ್ಲಿ ಒಳಗೊಂಡಿರುವ ಭೂಮಿಯ ಹೊಸ ಸರ್ವೆ ಸಂಖ್ಯೆಯೊಂದಿಗಿನ ಹೋಲಿಕೆಯ ಲಾಭವನ್ನು ಬಳಸಿಕೊಂಡು, ನ್ಯಾಯಾಲಯದ ಪ್ರಕ್ರಿಯೆನ್ನು ದುರುದ್ದೇಶ ಪೂರಿತವಾಗಿ ದುರುಪಯೋಗ ಪಡಿಸಿಕೊಂಡಿದ್ದಾನೆ ಎಂದು ವಿದ್ವತ್ಪೂರ್ಣ ವಕೀಲರು ವಾದಿಸಿದರು. ಪೊಲೀಸರ ಮುಂದೆ ಆರಂಭಿಕ ಲಿಖಿತ ದೂರನ್ನು ದಾಖಲಿಸಲಾಗಿದ್ದರೂ ಸಹ, ಅದರಲ್ಲಿ ಜಿ.ಎಂ.ಐ.ಡಿ. ಯನ್ನು ಆರೋಪಿ ಸಂಖ್ಯೆ 19 ಎಂದು ಗುರುತಿಸಲಾಗಿದ್ದರೂ ಸಹಾ ಆದರೆ ಅದರ ಪರಿಣಾಮವಾಗಿ ದಾಖಲಾದ ಎಫ್ಐಆರ್. ನಲ್ಲಿ, ಮೇಲ್ಮನವಿದಾರನನ್ನು ಆರೋಪಿ-18 ಎಂದು ಹೆಸರಿಸುವ ಮೂಲಕ ಅದರಲ್ಲಿ ಪಕ್ಷಕಾರರನ್ನಾಗಿ ಮಾಡಲಾಯಿತು ಎಂದು ವಾದಿಸಿದರು.

14. ಮೂಲ ಭೂಮಾಲೀಕರು ಮತ್ತು ಬಿಲ್ಡರ್ (ಜಿಎಂಐಡಿ) ವಿರುದ್ಧ ವಿವಿಧ ಪ್ರಕ್ರಿಯೆಗಳಲ್ಲಿ ವಿಫಲರಾದ ಅವರು ಯಶಸ್ವಿಯಾಗಲು ಸಾಧ್ಯವಾಗಲಿಲ್ಲ ಮತ್ತು ಅದಕ್ಕಾಗಿಯೇ ವೆಂಕಟೇಶನು ಸುಳ್ಳು ಆರೋಪಗಳನ್ನು ಮಾಡಿ ಸುಳ್ಳು ಮತ್ತು ಕ್ಷುಲ್ಲಕ ದೂರು ದಾಖಲಿಸಲು ತನ್ನ ಅನಕ್ಷರಸ್ಥ ತಾಯಿಯನ್ನು ಕರೆದಿದ್ದನು ಹಾಗೂ ಎಫ್ಐಆರ್ ಕಾನೂನಿನ ಪ್ರಕ್ರಿಯೆಗಳ ದುರುಪಯೋಗವೆಂದು ವಾದಿಸಿದರು. ಸಿವಿಲ್ ನ್ಯಾಯಾಲಯವು ನೀಡಿರುವ ತೀರ್ಪು ಪ್ರಕಾರ ಆಸ್ತಿ ಮೇಲಿನ ಸ್ವಾಮ್ಯದ ವಿಷಯವು ಅಂತಿಮಗೊಂಡಿದೆ ಮತ್ತು ಅದರ ವಿರುದ್ಧ ಯಾವುದೇ ಮೇಲ್ಮನವಿಯನ್ನು ಸಲ್ಲಿಸಲಾಗಿಲ್ಲ ಎಂದು ವಾದಿಸಿದರು. ಎಸ್ಸಿ/ಎಸ್ಟಿ ಕಾಯ್ದೆಯನ್ನು ಆಕರ್ಷಿಸುವ ಆರೋಪಗಳು ಸಹ ಉದ್ದೇಶ ಪೂರ್ವಕವಾಗಿವೆ ಮತ್ತು ದುರುದ್ದೇಶದಿಂದ ಕೂಡಿವೆ ಎಂದು ವಾದಿಸಿದರು.

15. ಒತ್ತಡ ಹೇರಲು ಮತ್ತು ಸಿವಿಲ್ ವಿವಾದಗಳನ್ನು ರಾಜಿಮಾಡಿಸಿಕೊಳ್ಳಲು ಸುಳ್ಳು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುವ ಅಭ್ಯಾಸವನ್ನು ಈ ನ್ಯಾಯಾಲಯವು ಪದೇ ಪದೇ ಖಂಡಿಸಿದೆಯೆಂದು ವಿದ್ವಾಂಸ ವಕೀಲರು ವಾದಿಸಿದರು. ದೃಷ್ಟಾಂತದ ಸಲುವಾಗಿ

ಅವರು ಈ ತೀರ್ಪುಗಳನ್ನು ಅವಲಂಬಿಸಿದ್ದರು. **ಗೋವಿಂದ ಪ್ರಸಾದ್ ಕೇಜ್ರಿವಾಲ್ ವರ್ಸಸ್ ಬಿಹಾರ ರಾಜ್ಯ,** (2020) 16 ಎಸ್. ಸಿ. ಸಿ. 714**; ಪೊಲೀಸ್ ಆಯುಕ್ತ ವರ್ಸಸ್ ದೇವೆಂದರ್ ಆನಂದ್,** 2019 ಎಸ್. ಸಿ. ಸಿ. ಆನ್ಲೈನ್ ಎಸ್. ಸಿ. 966**; ಬಿನೋದ್ ಕುಮಾರ್ ವಿ. ಸ್ಟೇಟ್ ಆಫ್ ಬಿಹಾರ,** (2014) 10 ಎಸ್. ಸಿ. ಸಿ. 663**; ಇಂಡಿಯನ್ ಆಯಿಲ್ ಕಾರ್ಪೊರೇಷನ್ ವರ್ಸಸ್ ಎನ್.ಇ.ಪಿ.ಸಿ. ಇಂಡಿಯಾ ಲಿಮಿಟೆಡ್,** (2006) 6 ಎಸ್. ಸಿ. ಸಿ. 736 ಮತ್ತು **ಜಿ. ಸಾಗರ್ಸುರಿ ವರ್ಸಸ್ ಉತ್ತರ ಪ್ರದೇಶದ ಸರ್ಕಾರ,** (2000) 2 ಎಸ್. ಸಿ. ಸಿ. 636**.**

16. ಇಲ್ಲಿಯವರೆಗೆ ಚಾರ್ಜ ಶೀಟ್ ಸಲ್ಲಿಸಲಾಗಿಲ್ಲ ಎಂದು ವಾದಿಸಲಾಗಿದೆ. ಅದೇ ಭೂಮಿಯಲ್ಲಿ ಜಿಎಂಐಡಿ 400 ಕ್ಕೂ ಹೆಚ್ಚು ಫಟಕಗಳ ವಸತಿ ಅಪಾರ್ಟ್ಮೆಂಟ್ ಸಂಕೀರ್ಣಗಳನ್ನು ಅಭಿವೃದ್ಧಿಪಡಿಸಿದೆ ಎಂದು ಕೂಡಾ ವಾದಿಸಲಾಗಿದೆ. ದೂರುದಾರನ ಕುಟುಂಬ ಅನೇಕ ಸಂದರ್ಭಗಳಲ್ಲಿ ಆ ಜಮೀನಿನ ಮೇಲಿನ ಮಾಲೀಕತ್ವವನ್ನು ಪಡೆಯಲು ವಿಫಲವಾಯಿತು ಮತ್ತು ನ್ಯಾಯ ಸಮ್ಮತವಲ್ಲದ ಪ್ರಯತ್ನಗಳಿಗೆ ಒಪ್ಪಿಕೊಳ್ಳಲು ಮೇಲ್ಮನವಿದಾರದಾರನನ್ನು ಒತ್ತಾಯಿಸಲು ದೂರುದಾರನು ಎಫ್.ಐ.ಆರ್.ನ್ನು ಒಂದು ಸಾಧನವಾಗಿ ಬಳಸಿದ್ದಾನೆ ಹೊರತು ಎಫ್ಐಆರ್ ಮತ್ತೇನೂ ಅಲ್ಲ. 2010ರಲ್ಲಿ, ದೂರುದಾರನ ಸಂಬಂಧಿಕರು ದಾವೆಯ ಆಸ್ತಿ ಮೇಲಿನ ಹಕ್ಕನ್ನು ಘೋಷಣೆ ಕೋರಿ ಸಿವಿಲ್ ದಾವೆ ಹೂಡಿದ್ದರು ಹಾಗೂ ಅದನ್ನು 2016ರಲ್ಲಿ ವಜಾಗೊಳಿಸಲಾಯಿತು. ತರುವಾಯ, ದೂರುದಾರನ ಪುತ್ರರು 2016 ರಲ್ಲಿ ಹೊಸ ದಾವೆ ಹೂಡಿದನು ಮತ್ತು ಮೇಲ್ಮನವಿದಾರನು ಆ ಭೂಮಿಯನ್ನು ಪ್ರವೇಶಿಸದಂತೆ ಪ್ರತಿಬಂಧಕಾಜ್ಞೆ ಆದೇಶ ಕೋರಿದರು. ಈ ದಾವೆಯು ಚಾಲ್ತಿಯಲ್ಲಿದ್ದು ಯಾವುದೇ ಮಧ್ಯಂತರ ಆದೇಶವಿಲ್ಲವೆಂದು ಹೇಳಲಾಗಿದೆ.

17. ದೂರುದಾರರ ಸಂಬಂಧಿಕರು ಆರಂಭದಲ್ಲಿ 2006 ರಲ್ಲಿ ದಾವೆಯ ಆಸ್ತಿಯ ಕುರಿತು ಹಸ್ತಕ್ಷೇಪ ಮಾಡಲು ಪ್ರಯತ್ನಿಸಿದರು ಹಾಗೂ ಆ ಕಾರಣ ಮೂಲಭೂಮಾಲೀಕರು 2008 ರಲ್ಲಿ ಸಿವಿಲ್ ದಾವೆಯನ್ನು ದಾಖಲಿಸಿದರು ಹಾಗೂ ಇದರಲ್ಲಿ ದೂರುದಾರರ ಕುಟುಂಬದ ಸದಸ್ಯರ ವಿರುದ್ಧ ತೀರ್ಪು ಬಂದಿದೆಯೆಂದು ವಿದ್ವಾಂಸ ವಕೀಲರು ನ್ಯಾಯಾಲಯದ ಗಮನಕ್ಕೆ ತಂದರು.

18. ಮೇಲ್ಮನವಿದಾರನ ಜೊತೆ ಜೆ.ಡಿ.ಎ. ಗೆ ಸಹಿ ಹಾಕಿದ್ದ ವ್ಯಕ್ತಿ (ಗಳು) 1954-1955ರಲ್ಲಿ ಆಸ್ತಿಯನ್ನು ಖರೀದಿಸಿದ್ದರು ಮತ್ತು ನಂತರ, ಅವರು ಹಿಡುವಳಿ ಮೇಲಿನ ಅಧಿಭೋಗದ ಹಕ್ಕುಗಳನ್ನು 09.07.1961ರಲ್ಲಿ ಪಡೆದರು, ಮತ್ತು 2017ರಲ್ಲಿ ಪ್ರಸ್ತುತ ಕ್ರಿಮಿನಲ್ ವಿವಾದವನ್ನು ದೂರುದಾರ ಮತ್ತು / ಅಥವಾ ಆಕೆಯ ಕುಟುಂಬ ಸದಸ್ಯರು ರೂಪಿಸಿದ್ದಾರೆ ಎಂದು ವಾದಿಸಲಾಗಿದೆ.

2ನೇ ಎದುರುದಾರ / ದೂರುದಾರನ ವಾದ ಮಂಡನೆಗಳು:

19. 2ನೇ ಎದುರುದಾರ / ದೂರುದಾರನ ಪರ ವಕೀಲರು ವಾದಿಸುತ್ತಾ ಮೇಲ್ಮನವಿಯು ತಪ್ಪುಕಲ್ಪನೆಯಿಂದ ಕೂಡಿದ್ದು ಪೋಲೀಸರು ತನಿಖೆ ನಡೆಸುತ್ತಿದ್ದು ಅದನ್ನು ಪೂರ್ಣಗೊಳಿಸಲು ಬಿಡಬೇಕೆಂದು ಮಂಡಿಸಿರುತ್ತಾರೆ. ದೂರುದಾರ ಪರಿಶಿಷ್ಟ

ಜಾತಿ/ಪರಿಶಿಷ್ಟ ಪಂಗಡದ ವರ್ಗಕ್ಕೆ ಸೇರಿದವನಾಗಿದ್ದಾನೆ ಮತ್ತು ಅದರ ಅಡಿಯಲ್ಲಿ ರಕ್ಷಿಸಲ್ಪಟ್ಟಿದ್ದಾನೆ ಎಂದು ವಾದಿಸಲಾಗಿದೆ. ಎಫ್ಐಆರ್. ನಲ್ಲಿ ಎಸ್ಸಿ/ಎಸ್ಟಿ ಕಾಯ್ದೆಯ ನಿಬಂಧನೆಗಳನ್ನು ಉಲ್ಲೇಖಿಸಿರುವುದನ್ನು ವಿದ್ವಾಂಸ ವಕೀಲರು ಬೆಂಬಲಿಸಿದರು. ಪ್ರಸ್ತುತ ಪ್ರಕರಣದಲ್ಲಿ ದಾಖಲೆಯ ಭಾಗವಾಗಬೇಕೆಂದು ಕೋರಿದ ಹೆಚ್ಚುವರಿ ದಾಖಲೆಗಳು ಉಚ್ಚ ನ್ಯಾಯಾಲಯದಲ್ಲಿನ ಪ್ರತಿಪಾದನೆಗಳ ಭಾಗವಾಗಿಲ್ಲ ಮತ್ತು ಆದ್ದರಿಂದ ಅವುಗಳನ್ನು ಪರಿಶೀಲಿಸಬಾರದೆಂದು ವಾದಿಸಲಾಗಿದೆ. ಇದು ಈ ಪ್ರಕರಣದಲ್ಲಿ ಹೊಸ ಸಂಗತಿಗಳನ್ನು ಪರಿಚಯಿಸುವುದಕ್ಕೆ ಸಮನಾಗಿರುತ್ತದೆ ಎಂದು ವಾದಿಸಲಾಗಿದೆ. ಸಂಹಿತೆಯ ಕಲಂ 482ರ ಪ್ರಕಾರ, ದೂರಿನಲ್ಲಿ ಯಾವುದೇ ಸಂಜ್ಞೇಯ ಅಪರಾಧವಿದೆಯೇ ಎಂಬುದನ್ನು ಮಾತ್ರ ನ್ಯಾಯಾಲಯವು ನೋಡಬೇಕು ಹಾಗೂ ಇದು ಪ್ರಸ್ತುತ ಪ್ರಕರಣದಲ್ಲಿ ಕಂಡುಬರುತ್ತೆ ಎಂದು ವಾದಿಸಲಾಗಿದೆ.

20. ವಂಚನೆ, ಕ್ರಿಮಿನಲ್ ಪಿತೂರಿ ಮತ್ತು ಅತಿಕ್ರಮಣ ಸಂಬಂಧಿಸಿದ ನಿರ್ದಿಷ್ಟ ಆರೋಪಗಳು ಐಪಿಸಿ ಅಡಿಯಲ್ಲಿ ಸಂಜ್ಞೇಯ ಅಪರಾಧಗಳಾಗಿರುವುದರಿಂದ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಸಮುದಾಯಕ್ಕೆ ಸೇರಿದ ಆಸ್ತಿಗೆ ಸಂಬಂಧಿಸಿದ ಆರೋಪಗಳು ಎಸ್ಸಿ/ ಎಸ್ಟಿ ಕಾಯೆ ಯ ನಿಬಂಧನೆಗಳನ್ನು ಆಕರ್ಷಿಸುತ್ತವೆ ಎಂದು ವಾದಿಸಲಾಗಿದೆ. ಪ್ರಶ್ನಿತ ಆಸ್ತಿ ಎದುರುದಾರ ಸಂಖ್ಯೆ.2 ಮತ್ತು ಅವರ ಕುಟುಂಬಕ್ಕೆ ಸೇರಿದೆ ಎಂದು ಪುನರ್ ಮಂಡಿಸಲಾಯಿತು ಮತ್ತು ವಿವಾದಿತ ಭೂಮಿಯ ಮೇಲೆ ಮಾಡಲಾದ ಯಾವುದೇ ನಿರ್ಮಾಣವು ನಕಲಿ ದಾಖಲೆಗಳನ್ನು ಸೃಷ್ಟಿಸುವ ಮೂಲಕವಾಗಿದೆ ಎಂದೂ ವಾದಿಸಿದರು.

21. ತನಿಖೆಯಲ್ಲಿ ಹಸ್ತಕ್ಷೇಪ ಮಾಡುವಲ್ಲಿ ಮತ್ತು ಎಫ್.ಐ.ಆರ್. ಗಳನ್ನು ರದ್ದುಗೊಳಿಸುವಲ್ಲಿ ನ್ಯಾಯಾಲಯವು ಅತ್ಯಂತ ಜಾಗರೂಕರಾಗಿರಬೇಕು ಎಂದು ನಂತರ ವಾದಿಸಲಾಯಿತು. ಅವರ ವಾದಗಳನ್ನು ಬೆಂಬಲಿಸಲು, ವಿದ್ವಾಂಸ ವಕೀಲರು ಈ ಕೆಳಗಿನ ತೀರ್ಪುಗಳನ್ನು ಮತ್ತು ಅದರೊಂದಿಗೆ ಸೂಚಿಸಲಾದ ಪ್ಯಾರಾಗಳನ್ನು ಅವಲಂಬಿಸಿದ್ದರುಃ

i. ಮಧ್ಯಪ್ರದೇಶ ರಾಜ್ಯ ವರ್ಸಸ್ ಸುರೇಂದ್ರ ಕೋರಿ,
(2012) 10 ಎಸ್. ಸಿ. ಸಿ 155 @ ಪ್ಯಾರಾ 14 ಮತ್ತು 16.

ii. ದಿನೇಶ್ ಭಾಯಿ ಚಂದು ಬಾಯಿ ಪಟೇಲ್ ವರ್ಸಸ್. ಸ್ಟೇಟ್ ಆಫ್ ಗುಜರಾತ್
(2018) 3 ಎಸ್. ಸಿ. ಸಿ. 104 @ ಪ್ಯಾರ 30-31

iii. ಸತ್ವಿಂದರ್ ಕೌರ್ ವರ್ಸಸ್ ರಾಜ್ಯ (ದೆಹಲಿಯ ರಾಷ್ಟ್ರೀಯ ರಾಜಧಾನಿ ಪ್ರದೇಶದ ಸರ್ಕಾರ), (1999) 8 ಎಸ್. ಸಿ. ಸಿ 728 @ ಪ್ಯಾರಾ 16

iv. ಪಿ. ಚಿದಂಬರಂ ವರ್ಸಸ್ ಜ್ಯಾರಿ ನಿರ್ದೇಶನಾಲಯ,
(2019) 9 ಎಸ್. ಸಿ. ಸಿ. 24 @ಪ್ಯಾರಾ 61, 64-67

v. ಸ್ಕೋಡಾ ಆಟೋ ವೋಕ್ಸಾವ್ಯಗನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ವಿರುದ್ಧ ಸ್ಟೇಟ್ ಉತ್ತರ ಪ್ರದೇಶ, (2021) 5 ಎಸ್. ಸಿ. ಸಿ 795 @ಪ್ಯಾರಾ 41

vi. ಯೂನಿಯನ್ ಆಫ್ ಇಂಡಿಯಾ ವರ್ಸಸ್ ಪ್ರಕಾಶ್ ಪಿ ಹಿಂದೂಜಾ,
(2003) 6 ಎಸ್.ಸಿ.ಸಿ ಎಚ್.195 @ ಪ್ಯಾರ 20 ಎ

22. ಇದಲ್ಲದೆ, ಎಫ್ಐಆರ್ ಒಂದು ವಿಶ್ವಕೋಶವಾಗಿರಬೇಕಾಗಿಲ್ಲ, ಇದು ಆಪಾದಿತ ಅಥವಾ ದೂರು ನೀಡಿದ ಅಪರಾಧದ (ಗಳ) ಎಲ್ಲಾ ಸಂಗತಿಗಳು ಮತ್ತು ವಿವರಗಳನ್ನು ಬಹಿರಂಗಪಡಿಸಬೇಕು ಎಂದು ಪ್ರತಿಪಾದಿಸಿದ ವಿದ್ವಾಂಸ ವಕೀಲರು ಈ ಕೆಳಗಿನ ತೀರ್ಪುಗಳನ್ನು ಅವಲಂಬಿಸಿದರು: **ಸಿಬಿಐ ವರ್ಸಸ್ ತಪನ್ ಕುಮಾರ್ ಸಿಂಗ್,** (2003) 6 ಎಸ್.ಸಿ.ಸಿ.175 (ಪ್ಯಾರ 20ರಲ್ಲಿ) ಮತ್ತು **ಉತ್ತರ ಪ್ರದೇಶ ರಾಜ್ಯ ವರ್ಸಸ್ ನರೇಶ್,** (2011) 4 ಎಸ್ಸಿಸಿ 324 (ಪ್ಯಾರಾ 32 ರಲ್ಲಿ).

ಎದುರುದಾರ ಸಂಖ್ಯೆ -1 / ರಾಜ್ಯದ ಬಗ್ಗೆ ವಾದಮಂಡನೆಗಳು:

23. ಈ ವಿಷಯವು ವಾಸ್ತವಾಂಶಗಳ ಬಗೆಗಿನ ವಿವಾದಿತ ಪ್ರಶ್ನೆಗಳನ್ನು ಒಳಗೊಂಡಿದ್ದು, ಅದನ್ನು ಈ ನ್ಯಾಯಾಲಯವು ಪರಿಶೀಲಿಸುವುದಿಲ್ಲ ಎಂದು ರಾಜ್ಯದ ಪರ ವಿದ್ವಾಂಸ ವಕೀಲರು ವಾದಿಸಿದರು. ಈ ಪ್ರಕರಣವನ್ನು ಪೊಲೀಸರು ತನಿಖೆ ಮಾಡಲು ಬಿಡಬೇಕು ಎಂಬುದು ಅವರ ಮನವಿಯಾ . ಇದಲ್ಲದೆ, **ದಿನೇಶ್ ಭಾಯಿ ಚಂದು ಬಾಯಿ ಪಟೇಲ್** (ಮೇಲೆ ಉಲ್ಲೇಖಿಸಿರುವ) ಪ್ರಕರಣದಲ್ಲಿ ಅಪರಾಧದ ತನಿಖೆ ನಡೆಸುವುದು ತನಿಖಾಧಿಕಾರಿಯ ಕರ್ತವ್ಯವಾಗಿದೆ ಮತ್ತು ಉಚ್ಚ ನ್ಯಾಯಾಲಯವು ತನಿಖಾಧಿಕಾರಿಯಾಗಿ ಕಾರ್ಯ ನಿರ್ವಹಿಸುವುದಿಲ್ಲ ಎಂದು ಅಭಿಪ್ರಾಯಪಟ್ಟಿದೆ ಎಂದು ಅವರು ವಾದಿಸಿರುತ್ತಾರೆ.

<u>ವಿಶ್ಲೇಷಣೆ, ಕಾರಣ ಮತ್ತು ತೀರ್ಮಾನಃ</u>

24. ಪ್ರಸ್ತುತ ವಿಷಯವನ್ನು ಪರಿಗಣಿಸಿದಾಗ, ಈ ನ್ಯಾಯಾಲಯದ ಹಸ್ತಕ್ಷೇಪದ ಅವಶ್ಯಕತೆ ಇದೆ ಎಂದು ಕಂಡುಬರುತ್ತೆ. ಗಮನಿಸಬೇಕಾದ ಮೂಲಭೂತ ಸಂಗತಿಗಳುಹೀಗಿವೆಃ **(ಎ)** ಜಿ.ಎಂ.ಐ.ಡಿ. ಯು ಜೊತೆಗೆ ಜೆ.ಡಿ.ಎ. ಮಾಡಿಕೊಂಡಿರುವ ಹಿಡುವಳಿ ಮಾಲೀಕರು ಆ ಹಿಡುವಳಿ ಭೂಮಿಯನ್ನು 1954-1955ರಲ್ಲಿ ಖರೀದಿಸಿದ್ದಾರೆ ಮತ್ತು; **(ಬಿ)** 09.07.1961ರಂದು ಮೂಲ ಹಿಡುವಳಿ ಮಾಲೀಕರ ಪರವಾಗಿ ಅಧಿಭೋಗದ ಹಕ್ಕುಗಳು ಮಂಜೂರಾಗಿವೆ. ಅಂದಿನಿಂದ, ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ವ್ಯಕ್ತಿ ಯಾವುದೇ ವಿವಾದವನ್ನು ಎತ್ತಿಲ್ಲ ಮತ್ತು 2009 ರಲ್ಲಿ ಜಿಎಂಐಡಿ ಯು ಮೂಲ ಭೂಮಾಲೀಕರೊಂದಿಗೆ ಜೆಡಿಎ ಮಾಡಿಕೊಂಡ ನಂತರ, ಸಂಬಂಧಪಟ್ಟ ಅಧಿಕಾರಿಗಳಿಂದ ಎಲ್ಲಾ ಅನುಮತಿಗಳನ್ನು ಪಡೆದ ನಂತರ, ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿತು ಮತ್ತು 400 ಕ್ಕೂ ಹೆಚ್ಚು ಸಂಖ್ಯೆಯ ಅಪಾರ್ಟ್ಮೆಂಟ್ಗಳನ್ನು ನಿರ್ಮಿಸಿತು, 2017 ರಲ್ಲಿ ಅವುಗಳನ್ನು ಖರೀದಿದಾರರು / ಹಂಚಿಕೆದಾರರಿಗೆ ಮಾರಾಟ ಮಾಡಿತು, ಹಾಗೂ ಆ ನಂತರ ಪ್ರಸ್ತುತ ವಿವಾದವು ಉದ್ಭವಿಸಿತು. ಇದು ಸ್ವತಃ ಪ್ರಾಮಾಣಿಕತೆಯ ಕೊರತೆಯನ್ನು ಸೂಚಿಸುತ್ತದೆ. ದೂರುದಾರ ಮತ್ತು ಆಕೆಯ ಕುಟುಂಬ ಸದಸ್ಯರು, ಭೂಮಿಯು ಅವರದ್ದಾಗಿದ್ದರೆ,

ದೀರ್ಘಕಾಲದವರೆಗೆ *"ಬೇಲಿಮೇಲೆ ಕುಳಿತುಕೊಳ್ಳುವವರಾಗಿ"* ಏಕೆ ನಿಷ್ಕ್ರಿಯರಾಗಿ ಕುಳಿತುಕೊಳ್ಳುತ್ತಾರೆ ಎಂದು ನಾವು ಸೋಜಿಗದಿಂದ ಯೋಚಿಸಿದೆವು.

25. ಇದಲ್ಲದೆ, ದೂರುದಾರ ಸಂಬಂಧಿಕರಿಗೆ ಯಾವುದೇ ಪರಿಹಾರ ನೀಡದೆ ಒಂದು ಸಿವಿಲ್ ದಾವೆಯು ಅಂತಿಮಗೊಂಡಾಗ, 2016ರಲ್ಲಿ ಮತ್ತೊಂದು ಸಿವಿಲ್ ದಾವೆಯನ್ನು ದಾಖಲಿಸಲಾಯಿತು ಮತ್ತು ಅದರಲ್ಲಿ, ದೂರುದಾರ / ಆಕೆಯ ಕುಟುಂಬ ಸದಸ್ಯರಿಗೆ ಯಾವುದೇ ಮಧ್ಯಂತರ ಆದೇಶ ಪಡೆಯಲು ಸಾಧ್ಯವಾಗದಿದ್ದಾಗ, ಪ್ರಸ್ತುತ ದೂರನ್ನು ದಾಖಲಿಸಲಾಗಿದೆ, ಇದರ ಪರಿಣಾಮವಾಗಿ ಎಫ್ಐಆರ್ ದಾಖಲಿಸಲಾಗಿದೆ. ಮೇಲೆ ತಿಳಿಸಲಾದ ಘಟನೆಗಳ ಅನುಕ್ರಮದಿಂದ ದುರುದ್ದೇಶವು ಪ್ರಖರವಾಗಿ ಕಾಣಿಸುತ್ತದೆ ಎಂದು ನಾವು ಹೇಳಲೇಬೇಕಾಗಿದೆ.

26. ನಾವು ನಮ್ಮ ತೀರ್ಪುಗಳಲ್ಲಿ ಮಾತುಗಾರಿಕೆಗೆ ಒಲವು ತೋರುತ್ತಿಲ್ಲವಾದರೂ, ನ್ಯಾಯಾಂಗದ ಪೂರ್ವ ನಿದರ್ಶನಗಳ ಸ್ವಲ್ಪ ವಿವರವಾದ ಸಮೀಕ್ಷೆಯು ಈ ಆದೇಶದಲ್ಲಿದೆ. **ಹರಿಯಾಣ ರಾಜ್ಯ ವಿರುದ್ಧ ಭಜನ್ಲಾಲ್, 1992 ಪೂರಕ (1) ಎಸ್. ಸಿ. ಸಿ. 335,** ದ ಪ್ರಕರಣದಲ್ಲಿ ಈ ನ್ಯಾಯಾಲಯವು ಈ ಕೆಳಗಿನಂತೆ ತೀರ್ಪು ನೀಡಿತು:

> "102. ಕೋಡ್ ನ ಹದಿನಾಲ್ಕನೇ ಅಧ್ಯಾಯದಡಿಯಲ್ಲಿ ವಿವಿಧ ಸಂಬಂಧಿತ ನಿಬಂಧನೆಗಳ ಮೇಲೆ ಈ ನ್ಯಾಯಾಲಯ ಮಾಡಿರುವ ವ್ಯಾಖ್ಯಾನದ ಹಿನ್ನೆಲೆಯಲ್ಲಿ ಮತ್ತು ಸಂವಿಧಾನದ ಅನುಛೇದ 226 ಅಡಿಯಲ್ಲಿ ಅಥವಾ ಕೋಡ್ ನ ಕಲಂ 482 ಅಡಿಯಲ್ಲಿ ಅಂತರ್ಗತವಾದ ಅಸಾಧಾರಣ ಅಧಿಕಾರದ ಬಳಕೆಗೆ ಸಂಬಂಧಿತ ನಿರ್ಧಾರಗಳ ಸರಣಿಯಲ್ಲಿ ಈ ನ್ಯಾಯಾಲಯವು ಪ್ರತಿಪಾದಿಸಿದ ಕಾನೂನಿನ ತತ್ವಗಳನ್ನು ನಾವು ಈ ಮೇಲೆ ಹೇಳಿರುವ ಮತ್ತು ಪುನರುತ್ಪಾದಿಸಿದ ಹಿನ್ನೆಲೆಯಲ್ಲಿ, ಯಾವುದೇ ನ್ಯಾಯಾಲಯದ ಪ್ರಕ್ರಿಯೆ ದುರುಪಯೋಗವನ್ನು ತಡೆಯಲು ಅಥವಾ ನ್ಯಾಯ ಉದ್ದೇಶಗಳನ್ನು ಭದ್ರಪಡಿಸಿಕೊಳ್ಳಲು, ಅಂತಹ ಅಧಿಕಾರವನ್ನು ಬಳಸಬಹುದಾದ ಸಂದರ್ಭಗಳ ಉದಾಹರಣೆಗಾಗಿ, ನಾವು ಈ ಕೆಳಗಿನ ವರ್ಗಗಳ ಪ್ರಕರಣಗಳನ್ನು ನೀಡುತ್ತೇವೆ. ಆದಾಗ್ಯೂ ಯಾವುದೇ ನಿಖರವಾದ, ಸ್ಪಷ್ಟವಾಗಿ ವ್ಯಾಖ್ಯಾನಿಸಬಹುದಾದ ಮತ್ತು ಸಾಕಷ್ಟು ಕ್ರಮಬದ್ಧವಾದ ಮತ್ತು ಸಂದರ್ಭಗಳ ಅವಶ್ಯಕತೆಗೆ ಹೊಂದಿಕೊಳ್ಳದಂತಹಾ ರೀತಿಯ ಮಾರ್ಗಸೂಚಿಗಳು ಅಥವಾ ಕಠಿಣಸೂತ್ರಗಳನ್ನು ನಿಗದಿಪಡಿಸಲು ಮತ್ತು ಅಂತಹ ಅಧಿಕಾರವನ್ನು ಚಲಾಯಿಸಬೇಕಾದ ಅಸಂಖ್ಯಾತ ರೀತಿಯ ಪ್ರಕರಣಗಳ ಸಮಗ್ರಪಟ್ಟಿಯನ್ನು ನೀಡಲು ಸಾಧ್ಯವಾಗುವುದಿಲ್ಲ.
>
> (1) ಪ್ರಥಮ ವರ್ತಮಾನ ವರದಿಯಲ್ಲಿ ಅಥವಾ ದೂರಿನಲ್ಲಿ ಮಾಡಲಾದ ಆರೋಪಗಳನ್ನು ಅವುಗಳ ಮುಖಬೆಲೆ ಮೇರೆ ತೆಗೆದುಕೊಂಡು ಅವುಗಳನ್ನು ಸಂಪೂರ್ಣವಾಗಿ ಸ್ವೀಕರಿಸಿದರೂ ಸಹ, ಅವುಗಳಲ್ಲಿ ಮೇಲ್ನೋಟಕ್ಕೆ ಯಾವುದೇ ಅಪರಾಧ

ಕಂಡುಬರುವುದಿಲ್ಲ ಅಥವಾ ಆರೋಪಿ ವಿರುದ್ಧ ಪ್ರಕರಣವನ್ನು ರೂಪಿಸುವುದಿಲ್ಲ.

(2) ಪ್ರಥಮ ವರ್ತಮಾನ ವರದಿಯಲ್ಲಿ ಅಥವಾ ಅದರೊಂದಿಗಿರಬಹುದಾದ ಇತರ ಸಾಮಗ್ರಿಗಳು ಸಂಜ್ಞೇಯ ಅಪರಾಧವನ್ನು ಬಹಿರಂಗಪಡಿಸದಿದ್ದಲ್ಲಿ, ಸಂಹಿತೆಯ ಕಲಂ 155(2) ರ ವ್ಯಾಪ್ತಿಯೊಳಗೆ ಮ್ಯಾಜಿಸ್ಟ್ರೇಟ್ ಆದೇಶ ಮಾಡಬಹುದಾದ್ದನ್ನು ಹೊರತು ಪಡಿಸಿ, ಸಂಹಿತೆಯ ಕಲಂ 156(1) ರ ಅಡಿಯಲ್ಲಿ ಪೊಲೀಸ್ ಅಧಿಕಾರಿಗಳು ತನಿಖೆಯನ್ನು ನಡೆಸುವುದನ್ನು ಸಮರ್ಥಿಸಲು ಅಸಾಧ್ಯವಾದಲ್ಲಿ.

(3) ಎಫ್ಐಆರ್ ಅಥವಾ ದೂರಿನಲ್ಲಿ ಮಾಡಲಾದ ಅನಿಯಂತ್ರಿತ ಆರೋಪಗಳು ಮತ್ತು ಅದಕ್ಕೆ ಬೆಂಬಲವಾಗಿ ಸಂಗ್ರಹಿಸಲಾದ ಪುರಾವೆ ಯಾವುದೇ ಅಪರಾಧವನ್ನು ಬಹಿರಂಗಪಡಿಸದಿದ್ದರೆ ಮತ್ತು ಆರೋಪಿ ವಿರುದ್ಧ ಪ್ರಕರಣವನ್ನು ರೂಪಿಸದಿದ್ದರೆ.

(4) ಎಫ್ಐಆರ್ ನಲ್ಲಿನ ಆರೋಪಗಳು ಸಂಜ್ಞೇಯ ಅಪರಾಧವನ್ನು ಬಹಿರಂಗಪಡಿಸದೇ ಕೇವಲ ಅಸಂಜ್ಞೇಯ ಅಪರಾಧವಾಗಿದ್ದು, ಪೊಲೀಸ್ ಅಧಿಕಾರಿಗೆ ತನಿಖೆಗೆ ಅನುಮತಿಸಿ ಸಂಹಿತೆಯ ಕಲಂ 155(2) ರ ಅಡಿಯಲ್ಲಿ ಪರಿಗಣಿಸಿರುವಂತಹಾ ಮ್ಯಾಜಿಸ್ಟ್ರೇಟ್ನ ಆದೇಶ ಇಲ್ಲವಾದಲ್ಲಿ.

(5) ಎಫ್ಐಆರ್ ಅಥವಾ ದೂರಿನಲ್ಲಿ ಮಾಡಲಾದ ಆರೋಪಗಳು ತೀರಾ ಅಸಂಬದ್ಧವಾಗಿ ಮತ್ತು ಅಂತರ್ಗತವಾಗಿ ಅಸಂಭವವಾಗಿದ್ದರೆ, ಅದರ ಆಧಾರದ ಮೇಲೆ ಯಾವುದೇ ವಿವೇಕಯುತ ವ್ಯಕ್ತಿ ಆರೋಪಿ ವಿರುದ್ಧ ನಡವಳಿಕೆ ಕೈಗೊಳ್ಳಲು ಸಾಕಷ್ಟು ಆಧಾರವಿದೆ ಎಂಬ ನ್ಯಾಯಯುತ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲದಂತಹಾ ಸಂದರ್ಭದಲ್ಲಿ.

(6) ಸಂಹಿತೆ ಅಥವಾ ಸಂಬಂಧಿತ ಕಾಯ್ದೆಯ (ಅದರ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿರಬೇಕು) ಪ್ರತಿಬಂಧ ನಿಬಂಧನೆಗಳಲ್ಲಿ ದೂರು ದಾಖಲಿಸುವ ಮತ್ತು ಅದನ್ನು ಮುಂದುವರಿಸುವ ಬಗ್ಗೆ ಮತ್ತು / ಅಥವಾ ಸಂಹಿತೆ ಅಥವಾ ಸಂಬಂಧಿತ ಕಾಯ್ದೆಯಲ್ಲಿ ಬಾಧಿತ ಪಕ್ಷಗಾರನ ಕುಂದು ಕೊರತೆಗಳಿಗೆ ಪರಿಣಾಮಕಾರಿ ಪರಿಹಾರವನ್ನು ಒದಗಿಸುವ ಬಗ್ಗೆ ನಿರ್ದಿಷ್ಟ ನಿಬಂಧನೆ ವ ಕಾನೂನು ಬದ್ಧ ನಿರ್ಬಂಧವಿದ್ದಲ್ಲಿ.

(7) ಕ್ರಿಮಿನಲ್ ನಡವಳಿಕೆ ದುರುದ್ದೇಶ ಪೂರಿತವಾಗಿದೆಯೆಂದು ಸ್ಪಷ್ಟವಾಗಿ ಪರಿಗಣಿಸಲು ಸಾಧ್ಯವಿರುವಲ್ಲಿ ಮತ್ತು/ಅಥವಾ ಆರೋಪಿ ಮೇಲೆ ಸೇಡುತೀರಿಸಿಕೊಳ್ಳುವ ದುರುದ್ದೇಶದಿಂದ ಮತ್ತು

ಖಾಸಗಿ ಮತ್ತು ವೈಯಕ್ತಿಕ ದ್ವೇಷದಿಂದಾಗಿ ಆತನ ವಿರುದ್ಧ ಹಗೆ ಸಾಧಿಸಲು ದುರುದ್ದೇಶಪೂರಿತವಾಗಿ ನಡವಳಿಕೆ ಪ್ರಾರಂಭಿಸಲಾಗಿರುವಲ್ಲಿ.

103. ಕ್ರಿಮಿನಲ್ ಮೊಕದ್ದಮೆಯನ್ನು ರದ್ದುಗೊಳಿಸುವ ಅಧಿಕಾರವನ್ನು ಬಹಳ ಮಿತವಾಗಿ ಮತ್ತು ಜಾಗರೂಕತೆಯಿಂದ ಬಳಸಬೇಕು ಮತ್ತು ಅದೂ ಸಹ ಅಪರೂಪದಲ್ಲಿ ಅಪರೂಪದ ಪ್ರಕರಣಗಳಲ್ಲಿ; ಎಫ್ಐಆರ್ ಅಥವಾ ದೂರಿನಲ್ಲಿ ಮಾಡಲಾದ ಆರೋಪಗಳ ವಿಶ್ವಾಸಾರ್ಹತೆ ಅಥವಾ ಪ್ರಾಮಾಣಿಕತೆ ಅಥವಾ ಇತರ ವಿಷಯಗಳ ಬಗ್ಗೆ ವಿಚಾರಣೆಯನ್ನು ಪ್ರಾರಂಭಿಸುವು ನ್ಯಾಯಾಲಯಕ್ಕೆ ಸಮರ್ಥನೀಯವಲ್ಲ ಮತ್ತು ಅಸಾಧಾರಣ ಅಥವಾ ಅಂತರ್ಗತ ಅಧಿಕಾರಗಳು ನ್ಯಾಯಾಲಯಕ್ಕೆ ಹುಚ್ಚಾಟಿಕೆ ಅಥವಾ ಕುತಂತ್ರದ ಪ್ರಕಾರ ಕಾರ್ಯ ನಿರ್ವಹಿಸಲು ನಿರಂಕುಶ ನ್ಯಾಯವ್ಯಾಪ್ತಿಯನ್ನು ನೀಡುವುದಿಲ್ಲ ಎಂಬ ಬಗ್ಗೆ ನಾವು ಎಚ್ಚರಿಕೆಯ ಟಿಪ್ಪಣಿ ನೀಡುತ್ತೇವೆ."

(ಒತ್ತುನೀಡಲಾಗಿದೆ)

27. ಈ ನ್ಯಾಯಾಲಯವು **ಎಸ್. ಡಬ್ಲ್ಯೂ. ಪಳನಿತ್ಕರ್ ವಿರುದ್ಧ ಬಿಹಾರ ರಾಜ್ಯ ಪ್ರಕರಣದಲ್ಲಿ, (2002) 1 ಎಸ್. ಸಿ. ಸಿ. 24,** ದಲ್ಲಿ ಹೀಗೆ ಹೇಳಿರುತ್ತೆ:

"... ಆದರೆ, ಸಿ.ಆರ್.ಪಿ.ಸಿ. ಕಲಂ 482ರ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವಾಗ, ಉಚ್ಚ ನ್ಯಾಯಾಲಯವು ಹೇಳಿರುವ ನಿಬಂಧನೆಯ ಅಡಿಯಲ್ಲಿ ಅಂತಹ ಅಧಿಕಾರವನ್ನು ಯಾವ ಉದ್ದೇಶಕ್ಕಾಗಿ ಅದಕ್ಕೆ ನೀಡಲಾಗಿದೆ ಎಂಬುದನ್ನು ನೋಡಬೇಕು. ಸಿ.ಆರ್.ಪಿ.ಸಿ. ಅಡಿಯಲ್ಲಿ ಯಾವುದೇ ಆದೇಶ ಜಾರಿಗೆ ತರಲು ಅಥವಾ ಯಾವುದೇ ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗವನ್ನು ತಡೆಯಲು ಅಥವಾ ನ್ಯಾಯ ಉದ್ದೇಶಗಳನ್ನು ಭದ್ರಪಡಿಸಿಕೊಳ್ಳಲು ಹೈಕೋರ್ಟಿಗೆ ಅಂತರ್ಗತ ಅಧಿಕಾರದ ಬಳಕೆಯು ಲಭ್ಯವಿದೆ. ಈ ನಿಲುವು ಇರುವುದರಿಂದ, ಸಿ.ಆರ್.ಪಿ.ಸಿ. ಕಲಂ 482ರ ಅಡಿಯಲ್ಲಿ ಅಧಿಕಾರದ ಬಳಕೆಯು ಮೇಲೆ ತಿಳಿಸಲಾದ ನಿರ್ಧಾರಗಳ ಬೆಳಕಿನಲ್ಲಿ ಅದರ ವ್ಯಾಪ್ತಿ ಮತ್ತು ಪರಿಧಿಗೆ ಅನುಗುಣವಾಗಿರಬೇಕು. ಸೂಕ್ತ ಸಂದರ್ಭಗಳಲ್ಲಿ, ನ್ಯಾಯಾಂಗದ ಪ್ರಕ್ರಿಯೆಯ ದುರುಪಯೋಗವನ್ನು ತಡೆಗಟ್ಟಲು ಹಾಗೂ ಹತಾಶ ಅಥವಾ ಪ್ರತೀಕಾರದ ಮನಸ್ಥಿತಿಯ ದಾವೆದಾರರ ಕೈಯಲ್ಲಿ ನ್ಯಾಯಾಂಗದ ಪ್ರಕ್ರಿಯೆಯು ದಬ್ಬಾಳಿಕೆ ಅಥವಾ ಕಿರುಕುಳದ ಅಸ್ತ್ರವಾಗದಂತೆ ನೋಡಿಕೊಳ್ಳಲು ಅಂತರ್ಗತ ಅಧಿಕಾರದ ಬಳಕೆಯು ಅಪೇಕ್ಷಣೀಯ ಮಾತ್ರವಲ್ಲದೆ ಅಗತ್ಯವೂ ಆಗಿದೆ, ಇದರಿಂದಾಗಿ ನ್ಯಾಯಾಲಯದ ನ್ಯಾಯಾಂಗ

ವೇದಿಕೆಯನ್ನು ಯಾವುದೇ ಪರೋಕ್ಷ ಉದ್ದೇಶಕ್ಕಾಗಿ ಬಳಸಲು ಅನುಮತಿಸಲಾಗುವುದಿಲ್ಲ. ಒಬ್ಬ ವ್ಯಕ್ತಿ ಸಿ.ಆರ್.ಪಿ.ಸಿ. ಕಲಂ 482ರ ಅಡಿಯಲ್ಲಿ ಉಚ್ಚ ನ್ಯಾಯಾಲಯವನ್ನು ಸಂಪರ್ಕಿಸಿದಾಗ, ಪ್ರಕ್ರಿಯೆ ಜ್ಯಾರಿಗೊಳಿಸಿರುವುದನ್ನು ರದ್ದು ಮಾಡಬೇಕೆಂದು ಕೇಳಿಕೊಂಡಾಗ, ಅಯಾಯ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳ ಮೇಲೆ ಉಚ್ಚ ನ್ಯಾಯಾಲಯವು, ಆ ಅಧಿಕಾರವನ್ನು ಯಾವ ಉದ್ದೇಶಕ್ಕಾಗಿ ಮತ್ತು ಗುರಿಗಾಗಿ ನೀಡಲಾಗಿದೆಯೋ ಅದನ್ನು ನಿಜವಾಗಿಯೂ ಪೂರೈಸಲು, ಮೇಲೆ ಹೇಳಿರುವಂತೆ ಜಾಗರೂಕತೆಯಿಂದ ಅಧಿಕಾರವನ್ನು ಚಲಾಯಿಸಬೇಕಾಗುತ್ತದೆ."

(ಒತ್ತುನೀಡಲಾಗಿದೆ)

28. **ಕರ್ನಾಟಕ ರಾಜ್ಯ ವಿರುಧ್ದ ಎಂ. ದೇವೇಂದ್ರಪ್ಪ (2002) 3 ಎಸ್. ಸಿ. ಸಿ. 89 ,** ಪ್ರಕರಣದಲ್ಲಿ ಈ ರೀತಿ ನಿರ್ಧರಿಸಲಾಯಿತುಃ

"6. ಈ ರೀತಿಯ ಪ್ರಕರಣ ಸಂಹಿತೆಯ ಕಲಂ 482ರ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವುದು ವಿನಾಯಿತಿಯೇ ಹೊರತು ನಿಯಮವಲ್ಲ. ಈ ವಿಭಾಗವು ಉಚ್ಚ ನ್ಯಾಯಾಲಯಕ್ಕೆ ಯಾವುದೇ ಹೊಸ ಅಧಿಕಾರವನ್ನು ನೀಡುವುದಿಲ್ಲ. ಇದು ಸಂಹಿತೆಯನ್ನು ಜಾರಿಗೆ ತರುವ ಮೊದಲು ನ್ಯಾಯಾಲಯವು ಹೊಂದಿದ್ದ ಅಂತರ್ಗತ ಅಧಿಕಾರವನ್ನು ಮಾತ್ರ ಉಳಿಸುತ್ತದೆ. ಅಂತರ್ಗತ ನ್ಯಾಯವ್ಯಾಪ್ತಿಯನ್ನು ಚಲಾಯಿಸಬಹುದಾದ ಮೂರು ಸಂದರ್ಭಗಳನ್ನು ಇದು ರೂಪಿಸುತ್ತದೆ, ಅವುಗಳೆಂದರೆ:

(i) ಸಂಹಿತೆ ಅಡಿಯಲ್ಲಿ ಆದೇಶ ಜಾರಿಗೆ ತರಲು,

(ii) ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗವನ್ನು ತಡೆಯಲು, ಮತ್ತು

(iii) ನ್ಯಾಯ ಉದ್ದೇಶಗಳನ್ನು ಭದ್ರಪಡಿಸಿಕೊಳ್ಳಲು,

ಅಂತರ್ಗತ ನ್ಯಾಯವ್ಯಾಪ್ತಿಯ ಬಳಕೆಯನ್ನು ನಿಯಂತ್ರಿಸುವ ಯಾವುದೇ ಸಂದರ್ಭಕ್ಕೆ ಹೊಂದಿಕೊಳ್ಳುವ ನಿಯಮವನ್ನು ವಿಧಿಸುವುದು ಸಾಧ್ಯವಿಲ್ಲ ಅಥವಾ ಅಪೇಕ್ಷಣೀಯವೂ ಅಲ್ಲ. ಕಾರ್ಯವಿಧಾನವನ್ನು ನಿಗದಿಪಡಿಸುವ ಯಾವುದೇ ಶಾಸಕಾಂಗದ ಕಾನೂನು ಕೂಡಾ ಸಂಭವನೀಯವಾಗಿ ಉದ್ಭವಿಸಬಹುದಾದ ಎಲ್ಲಾ ಪ್ರಕರಣಗಳಿಗೆ ಕೂಡಾ ಅನ್ವಯಿಸುವ ರೀತಿಯ ವಿವರವನ್ನು ಒದಗಿಸುವುದಿಲ್ಲ. ಆದ್ದರಿಂದ, ನ್ಯಾಯಾಲಯಗಳು, ಕಾನೂನಿನ ಮೂಲಕ ತಮ್ಮ ಮೇಲೆ ವಿಧಿಸಲಾದ ಕರ್ತವ್ಯಗಳ

ಜೊತೆ ಅಂತರ್ಗತ ಅಧಿಕಾರಗಳನ್ನು ಹೊಂದಿವೆ ಮತ್ತು ಕಾನೂನಿನಡಿ ಹೇಳಿದ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಲು ಇವು ಅಗತ್ಯವಾಗಿವೆ. ಇದು ಕೇವಲ ಉಚ್ಚ ನ್ಯಾಯಾಲಯಗಳ ಅಂತರ್ಗತ ಅಧಿಕಾರಗಳನ್ನು ಗುರುತಿಸುವ ಮತ್ತು ಸಂರಕ್ಷಿಸುವ ವಿಭಾಗದಲ್ಲಿ ಅಭಿವ್ಯಕ್ತಿಯನ್ನು ಕಂಡುಕೊಳ್ಳುವ ಸಿದ್ಧಾಂತವಾಗಿದೆ. ಎಲ್ಲಾ ನ್ಯಾಯಾಲಯಗಳು, ಸಿವಿಲ್ ಅಥವಾ ಕ್ರಿಮಿನಲ್ ಆಗಿರಲಿ, ವ್ಯಕ್ತಪಡಿಸಲಾದ ಕಾನೂನಿನ ನಿಬಂಧನೆಯ ಅನುಪಸ್ಥಿತಿಯಲ್ಲಿ, ತಮಗೆ ಸಂವಿಧಾನದಲ್ಲಿ ಅಂತರ್ಗತವಾಗಿರುವಂತೆ, ಆಯಾಯ ನ್ಯಾಯಾಲಯಗಳ ರಚನೆಯಲ್ಲಿ ಅಂತರ್ಗತವಾಗಿರುವಂತೆ, ನ್ಯಾಯ ಆಡಳಿತದ ಹಾದಿಯಲ್ಲಿ ಒಳ್ಳೆಯದನ್ನು ಮಾಡಲು ಮತ್ತು ತಪ್ಪನ್ನು ಸರಿಪಡಿಸಲು ಅಗತ್ಯವಾದ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತಾರೆ. ಇದು quando lex aliquid alicui concedit concedere videtur et id sine quo res ipse esse non potest (ಕಾನೂನು ಒಬ್ಬಾತನಿಗೆ ಏನನ್ನಾದರೂ ಕೊಟ್ಟಾಗ, ಯಾವುದು ಇಲ್ಲದಿದ್ದರೆ ಅದರ ಉಳಿವು ಅಸಾಧ್ಯವೋ, ಅದನ್ನು ಕೂಡಾ ಕೊಡುತ್ತೆ) ಎಂಬ ತತ್ವದ ಮೇಲೆ ಇದು ಅವಲಂಬಿತವಾಗಿದೆ. ಈ ವಿಭಾಗದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವಾಗ, ನ್ಯಾಯಾಲಯವು ಮೇಲ್ಮನವಿ ಅಥವಾ ಪರಿಷ್ಕರಣೆಯ ನ್ಯಾಯಾಲಯವಾಗಿ ಕಾರ್ಯ ನಿರ್ವಹಿಸುವುದಿಲ್ಲ. ಈ ವಿಭಾಗದ ಅಡಿಯಲ್ಲಿ ಅಂತರ್ಗತ ನ್ಯಾಯವ್ಯಾಪ್ತಿಯು ವ್ಯಾಪಕವಾಗಿದ್ದರೂ ಕೂಡಾ, ಮಿತವಾಗಿ, ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಬಳಸಬೇಕು ಮತ್ತು ಸಂಬಂಧಪಟ್ಟ ಕಲಂನಲ್ಲಿ ನಿರ್ದಿಷ್ಟವಾಗಿ ನಿಗದಿಪಡಿಸಿದ ಪರೀಕ್ಷೆಗಳಿಂದ ಸಮರ್ಥಿಸಿದಾಗ ಮಾತ್ರ ಅಂತಹ ಬಳಕೆಯನ್ನು ಮಾಡಬೇಕು. ನಿಜವಾದ ಮತ್ತು ಗಣನೀಯ ನ್ಯಾಯ ex debito justitiae ನೀಡಲೆಂದೇ ಎಲ್ಲಾ ನ್ಯಾಯಾಲಯಗಳು ಅಸ್ತಿತ್ವದಲ್ಲಿವೆ. ನ್ಯಾಯ ಪ್ರಗತಿಗೆಂದೇ ನ್ಯಾಯಾಲಯದ ಅಧಿಕಾರವು ಅಸ್ತಿತ್ವದಲ್ಲಿದೆ ಮತ್ತು ಅನ್ಯಾಯವನ್ನು ಉಂಟುಮಾಡುವ ಸಲುವಾಗಿ ಆ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಲು ಯಾವುದೇ ಪ್ರಯತ್ನವನ್ನು ಮಾಡಿದರೆ, ದುರುಪಯೋಗವನ್ನು ತಡೆಯಲು ನ್ಯಾಯಾಲಯಕ್ಕೆ ಅಧಿಕಾರವಿದೆ. ಅನ್ಯಾಯಕ್ಕೆ ಕಾರಣವಾಗುವ ಮತ್ತು ನ್ಯಾಯವನ್ನು ಉತ್ತೇಜಿಸುವುದನ್ನು ತಡೆಯುವ ಯಾವುದೇ ಕ್ರಮಕ್ಕೆ ಅವಕಾಶ ನೀಡುವುದು ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗ. ಅಧಿಕಾರವನ್ನು ಚಲಾಯಿಸುವಾಗ, ಯಾವುದೇ ಪ್ರಕರಣವನ್ನು ಪ್ರಾರಂಭಿಸಿರುವುದು / ಮುಂದುವರೆಸಿರುವುದು ನ್ಯಾಯಾಲಯದ ಪ್ರಕ್ರಿಯೆ ದುರುಪಯೋಗವೆಂದು ಅಥವಾ ಈ

ವ್ಯವಹರಣೆಗಳನ್ನು ರದ್ದುಮಾಡುವುದು ನ್ಯಾಯಉದ್ದೇಶಗಳನ್ನು ಪೂರೈಸುತ್ತದೆ ಎಂದು ನ್ಯಾಯಾಲಯ ಕಂಡುಕೊಂಡರೆ ಅದನ್ನು ರದ್ದುಮಾಡುವುದು ನ್ಯಾಯಸಮ್ಮತವಾಗಿರುತ್ತದೆ. ದೂರಿನಲ್ಲಿ ಯಾವುದೇ ಅಪರಾಧವನ್ನು ಬಹಿರಂಗಪಡಿಸದಿದ್ದಾಗ, ನ್ಯಾಯಾಲಯವು ವಾಸ್ತವತೆಯ ಪ್ರಶ್ನೆಯನ್ನು ಪರಿಶೀಲಿಸಬಹುದು. ದೂರನ್ನು ರದ್ದುಗೊಳಿಸಲು ಪ್ರಯತ್ನಿಸಿದಾಗ, ದೂರುದಾರ ಏನು ಆರೋಪಿಸಿದ್ದಾನೆ ಮತ್ತು ಆರೋಪಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡರೂ ಸಹ ಯಾವುದೇ ಅಪರಾಧವು ಕಂಡುಬರುತ್ತದೆಯೇ ಎಂದು ನಿರ್ಣಯಿಸಿ ವಾಸ್ತವಾಂಶಗಳನ್ನು ಪರಿಶೀಲಿಸಲು ಅನುಮತಿ ಇದೆ."

(ಒತ್ತುನೀಡಲಾಗಿದೆ)

29. **ಉಮಾಶಂಕರ್ ಗೋಪಾಲಿಕಾ ವರ್ಸಸ್ ಬಿಹಾರ ರಾಜ್ಯ (2005) 10 ಎಸ್.ಸಿ.ಸಿ. 336,** ಅದರ 7ನೇ ಪ್ಯಾರಾದಲ್ಲಿ, ದೂರಿನಲ್ಲಿ ಯಾವುದೇ ಕ್ರಿಮಿನಲ್ ಅಪರಾಧವನ್ನು ಬಹಿರಂಗಪಡಿಸಲು ವಿಫಲವಾದಾಗ, ಸಂಹಿತೆಯ ಕಲಂ 482ರ ಅಡಿಯಲ್ಲಿ ನಡವಳಿಕೆ ರದ್ದುಗೊಳಿಸಬಹುದು ಎಂದು ಹೇಳಿದೆ.

"ನಮ್ಮ ದೃಷ್ಟಿಯಲ್ಲಿ ದೂರಿನ ಅರ್ಜಿಯು ಐಪಿಸಿ ಕಲಂ 420 ಅಥವಾ ಕಲಂ 120-ಬಿ ಅಡಿಯಲ್ಲಿ ಯಾವುದೇ ಕ್ರಿಮಿನಲ್ ಅಪರಾಧವನ್ನು ಬಹಿರಂಗಪಡಿಸುವುದಿಲ್ಲ ಮತ್ತು ಪ್ರಸ್ತುತ ಪ್ರಕರಣವು ಪಕ್ಷಗಾರರ ನಡುವಿನ ಸಂಪೂರ್ಣವಾಗಿ ಸಿವಿಲ್ ವಿವಾದದ ಪ್ರಕರಣವಾಗಿದೆ, ಇದಕ್ಕಾಗಿ ಪರಿಹಾರ ಸಿವಿಲ್ ನ್ಯಾಯಾಲಯದ ಮುಂದೆ ದಾವೆ ರಚಿಸಿ ಮೊಕದ್ದಮೆಯನ್ನು ಸಲ್ಲಿಸುವ ಮೂಲಕ ಪಡೆಯಬೇಕಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ, ಈ ಸಂಗತಿಗಳ ದೃಷ್ಟಿಯಿಂದ, ಪೊಲೀಸ್ ತನಿಖೆಯನ್ನು ಮುಂದುವರಿಸಲು ಅವಕಾಶ ನೀಡುವುದು ನ್ಯಾಯಾಲಯದ ಪ್ರಕ್ರಿಯೆ ದುರುಪಯೋಗಕ್ಕೆ ಸಮನಾಗಿರುತ್ತದೆ ಮತ್ತು ಅದನ್ನು ತಡೆಗಟ್ಟಲು, ಸಂಹಿತೆಯ ಕಲಂ 482 ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವ ಮೂಲಕ ಅದನ್ನು ರದ್ದು ಮಾಡುವುದು ನ್ಯಾಯಯುತ ಮತ್ತು ಅನುಕೂಲಕರವಾಗಿದೆ ಹಾಗೂ ಹೈಕೋರ್ಟ್ ಅದನ್ನು ತಪ್ಪಾಗಿ ನಿರಾಕರಿಸಿ ."

(ಒತ್ತುನೀಡಲಾಗಿದೆ)

30. ಈ ವಿಷಯದ ಮೇಲಿನ ಕಾನೂನನ್ನು **ಪರ್ಬತ್ಭಾಯ್ ಅಹಿರ್ ವಿರುದ್ಧ ಗುಜರಾತ್ ರಾಜ್ಯ (2017) 9 ಎಸ್.ಸಿ. ಸಿ.641** ನಲ್ಲಿ ಪರಿಶೀಲಿಸಲಾಗಿದೆ. **ಹಬೀಬ್ ಅಬ್ದುಲ್ಲಾ ಜೀಲಾನಿ, (2017) 2 ಎಸ್. ಸಿ. ಸಿ. 779,** ನಲ್ಲಿ ಇದು ಅಭಿಪ್ರಾಯವಾಗಿದೆಃ

> "ಎಫ್ಐಆರ್ ನ್ನು ರದ್ದುಪಡಿಸುವ ವಿಷಯದಲ್ಲಿ ಅಂತರ್ಗತ ಅಧಿಕಾರವನ್ನು ಮಿತವಾಗಿ ಮತ್ತು ಎಚ್ಚರಿಕೆಯಿಂದ ಬಳಸಬೇಕು ಮತ್ತು ಯಾವಾಗ ಅಂತಹ ಅಭ್ಯಾಸವನ್ನು ನಿರ್ದಿಷ್ಟವಾಗಿ ನಿಬಂಧನೆಯಲ್ಲಿ ನಿಗದಿಪಡಿಸಿದ ಪರೀಕ್ಷೆಯಿಂದ ಸಮರ್ಥಿಸಲಾಗುತ್ತದೆಯೋ ಅವಾಗ ಮಾತ್ರ ಬಳಸಬೇಕು. ಸಿ.ಆರ್.ಪಿ.ಸಿ. ಕಲಂ 482 ರ ಅಡಿಯಲ್ಲಿ ಅಧಿಕಾರವು ಬಹಳ ವಿಸ್ತಾರವಾಗಿದೆ ಎಂಬ ಅಂಶವನ್ನು ನಿರಾಕರಿಸಲಾಗುವುದಿಲ್ಲ ಆದರೆ ವ್ಯಾಪಕ ಅಧಿಕಾರವನ್ನು ಬಳಸುವುದಕ್ಕೆ ನ್ಯಾಯಾಲಯವು ಹೆಚ್ಚು ಜಾಗರೂಕರಾಗಿರಬೇಕು ಎಂದು ಹೇಳಲು ವಿಶೇಷ ಒತ್ತು ನೀಡುವ ಅಗತ್ಯವಿಲ್ಲ. ಇದು ನ್ಯಾಯಾಲಯದ ಮೇಲೆ ಕಠಿಣ ಮತ್ತು ಹೆಚ್ಚು ಶ್ರದ್ಧೆಯ ಕರ್ತವ್ಯವನ್ನು ಹೇರುತ್ತದೆ."

(ಒತ್ತುನೀಡಲಾಗಿದೆ)

31. **ವಿನೋದ್ ನಟೇಶನ್ ವರ್ಸಸ್ ಕೇರಳರಾಜ್ಯ, (2019) 2 ಎಸ್. ಸಿ. ಸಿ. 401,** ದಲ್ಲಿ ಈ ನ್ಯಾಯಾಲಯವು ಇಲ್ಲಿ ವಿವರಿಸಿರುವ ನಿಲುವನ್ನು ತೆಗೆದುಕೊಂಡಿತು:

> "11. ... ಇಲ್ಲದಿದ್ದರೂ ಸಹ, ಮೇಲೆ ಗಮನಿಸಿದಂತೆ, ಆರೋಪಿ ಕಡೆಯಿಂದ ಯಾವುದೇ ಅಪರಾಧವಿಲ್ಲ ಮತ್ತು ಸಿವಿ ವಿವಾದವನ್ನು ಕ್ರಿಮಿನಲ್ ವಿವಾದವಾಗಿ ಪರಿವರ್ತಿಸಲು ಪ್ರಯತ್ನಿಸಲಾಗಿದೆ ಎಂದು ಹೇಳುವುದರಲ್ಲಿ ನಮಗೆ ಹೆಚ್ಚು ತೃಪ್ತಿ ಇದೆ. ಹೀಗಾಗಿ ಆರೋಪಿ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಮುಂದುವರಿಸುವುದು ಕಾನೂನು ಪ್ರಕ್ರಿಯೆಯ ದುರುಪಯೋಗವಾಗಿದೆ. ಆದ್ದರಿಂದ, ಉಚ್ಚ ನ್ಯಾಯಾಲಯವು ಸಿ.ಆರ್.ಪಿ.ಸಿ. ಯ ಕಲಂ 482ರ ಅಡಿಯಲ್ಲಿ ಅಧಿಕಾರವನ್ನು ಸರಿಯಾಗಿ ಚಲಾಯಿಸಿದೆ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ರದ್ದುಗೊಳಿಸಿರುವುದು ಸರಿಯಾಗಿದೆ. ಮೇಲೆ ಹೇಳಲಾದ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು, ಪ್ರಸ್ತುತ ಮನವಿಯು ವಿಫಲಗೊಳ್ಳುತ್ತದೆ ಮತ್ತು ವಜಾಗೊಳಿಸಲು ಅರ್ಹವಾಗಿದೆ ಮತ್ತು ತದನುಸಾರವಾಗಿ ಅದನ್ನು ವಜಾಗೊಳಿಸಲಾಗುತ್ತದೆ."

(ಒತ್ತುನೀಡಲಾಗಿದೆ)

32. **ಕಮಲ್ ಶಿವಾಜಿ ಪೋಕರ್ನೇಕರ್ ವರ್ಸಸ್ ಮಹಾರಾಷ್ಟ್ರ ರಾಜ್ಯ (2019) 14 ಎಸ್ಸಿಸಿ 350** ಯಲ್ಲೂ ಕಾನೂನಿನ ಸ್ಥಾನಮಾನವನ್ನು ಪರಿಗಣಿಸಲಾಗಿತ್ತು. **ಮಹೇಂದ್ರ ಕೆ.ಸಿ. ವರ್ಸಸ್ ಕರ್ನಾಟಕ ರಾಜ್ಯ, 2021 ಎಸ್. ಸಿ. ಸಿ. ಆನ್ಲೈನ್ ಎಸ್. ಸಿ. 1021**, ದಲ್ಲಿ ಈ ನ್ಯಾಯಾಲಯವು ಹೀಗೆ ಹೇಳಿದೆ:

> "23. ... ಉಚ್ಚ ನ್ಯಾಯಾಲಯವು ಸಿ.ಆರ್.ಪಿ.ಸಿ. ಯ 482ನೇ ಕಲಂ ಅಡಿಯಲ್ಲಿ ತನ್ನ ಅಧಿಕಾರವನ್ನು ಚಲಾಯಿಸುವಾಗ, ಎರಡನೇ

> ಎದುರುದಾರ - ಆರೋಪಿಯ ವಿರುದ್ಧ ದಾಖಲಿಸಲಾದ ಎಫ್ಐಆರ್ ಅನ್ನು ರದ್ದು ಮಾಡುವಾಗ, ಈ ಕೆಳಗಿನ ಎರಡು ಪರೀಕ್ಷೆಗಳನ್ನು ಅನ್ವಯಿಸಬೇಕಾಗಿತ್ತು:
>
> (i) ದೂರಿನಲ್ಲಿ ಮಾಡಲಾದ ಆರೋಪಗಳು ಮೇಲ್ನೋಟಕ್ಕೆ ಅಪರಾಧವಾಗುತ್ತವೆಯೇ; ಮತ್ತು
>
> (ii) ದೂರನ್ನು ಮುಂದುವರಿಸಲು ಸಾಕಷ್ಟು ಆಧಾರವಿದೆ ಎಂಬ ತೀರ್ಮಾನಕ್ಕೆ ವಿವೇಕಯುತ ವ್ಯಕ್ತಿಯು ಬರಲು ಸಾಧ್ಯವಾಗದಷ್ಟು ಆರೋಪಗಳು ಅಸಂಭವವಾಗಿವೆಯೇ."

33. **ಅರ್ನಬ್ ಮನೋರಂಜನ್ ಗೋಸ್ವಾಮಿ ವರ್ಸಸ್ ಮಹಾರಾಷ್ಟ್ರ ರಾಜ್ಯ (2021) 2 ಎಸ್ಸಿಸಿ 427;** ಪ್ರಕರಣದಲ್ಲಿ 68ನೇಪ್ಯಾರಾದಲ್ಲಿ, ಹೇಳಿರುವ ಈ ಮಾತುಗಳೂ ನಮ್ಮ ಮನದಲ್ಲಿವೆ:

> "ವರ್ಣಪಟಲದ ಇನ್ನೊಂದು ತುದಿಯೂ ಅಷ್ಟೇ ಮುಖ್ಯವಾಗಿದೆ: ಪ್ರಕ್ರಿಯೆಯ ದುರುಪಯೋಗವನ್ನು ತಡೆಗಟ್ಟಲು ಅಥವಾ ನ್ಯಾಯ ಉದ್ದೇಶಗಳನ್ನು ಭದ್ರಪಡಿಸಿಕೊಳ್ಳಲು ಉಚ್ಚನ್ಯಾಯಾಲಯದಲ್ಲಿ ಅಂತರ್ಗತವಾಗಿ ಪಡೆದ ಅಧಿಕಾರವನ್ನು ಗುರುತಿಸುವ ಕಲಂ 482 ರ ಮಾನ್ಯತೆಯು ಸ್ವಾತಂತ್ರ್ಯವನ್ನು ರಕ್ಷಿಸಲು ಒಂದು ಅಮೂಲ್ಯವಾದ ರಕ್ಷಣೆಯಾಗಿದೆ."

ಈ ಹೇಳಿಕೆಯ ಜೊತೆ ನಾವು ಕೂಡಾ ಇದ್ದೇವೆ. ಈ ಕಾನೂನಿನ ವಿವರವಾದ ವ್ಯಾಖ್ಯೆ ವಿವರಣೆಯೂ ಸಹ **ನೀಹಾರಿಕಾ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ವರ್ಸಸ್ ಮಹಾರಾಷ್ಟ್ರರಾಜ್ಯ, 2021 ಎಸ್. ಸಿ. ಸಿ. ಆನ್ಲೈನ್ ಎಸ್.ಸಿ. 325** ಅನ್ನು ಈ ಪ್ರಕರಣ ನಿರ್ಣಯಿಸುವಾಗ ನಾವು ಗಣನೆಗೆ ತೆಗೆದುಕೊಂಡಿದ್ದೇವೆ.

34. ಎಸ್ಸಿ/ಎಸ್ಟಿ ಕಾಯ್ದೆಯನ್ನು ಒಳಗೊಂಡ ಪ್ರಕರಣಗಳಲ್ಲಿ ಹಸ್ತಕ್ಷೇಪಕ್ಕೆ ಸಂಬಂಧಿಸಿದಂತೆ, ನಾವು 3-ನ್ಯಾಯಾಧೀಶರ ಪೀಠದ ತೀರ್ಪೊಂದನ್ನು ಮಾತ್ರ ಸೂಚಿಸಿದರೆ ಸಾಕಾಗಬಹುದು. ಈ ನ್ಯಾಯಾಲಯವು **ರಾಮಾವತಾರ್ ವರ್ಸಸ್ ಮಧ್ಯಪ್ರದೇಶ ರಾಜ್ಯ, 2021 ಎಸ್. ಸಿ. ಸಿ. ಆನ್ಲೈನ್ ಎಸ್. ಸಿ. 966,** ರಲ್ಲಿ ಅಪರಾಧವು 'ವಿಶೇಷ ಶಾಸನ' ದ ವ್ಯಾಪ್ತಿಗೆ ಬರುತ್ತದೆ ಎಂಬ ಕೇವಲ ಸತ್ಯವು ಈ ನ್ಯಾಯಾಲಯ ಅಥವಾ ಉಚ್ಚನ್ಯಾಯಾಲಯವು ಸಂವಿಧಾನದ ಅನಚ್ಛೇದ 142 ಅಥವಾ ಸಂಹಿತೆಯ ಕಲಂ 482ರ ಅಡಿಯಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸುವುದನ್ನು ತಡೆಯುವುದಿಲ್ಲ ಎಂದು ತೀರ್ಪು ನೀಡಿದೆ:

> "15. ಸಾಮಾನ್ಯವಾಗಿ, ಎಸ್ಸಿ/ಎಸ್ಟಿ ಕಾಯ್ದೆಯಂತಹ ವಿಶೇಷ ಕಾನೂನುಗಳಿಂದ ಉಂಟಾಗುವ ಅಪರಾಧಗಳನ್ನು ನಿಭಾಯಿಸುವಾಗ, ನ್ಯಾಯಾಲಯವು ಅತ್ಯಂತ

ಜಾಗರೂಕತೆಯಿಂದ ಇರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರ ವಿರುದ್ಧದ ಅವಮಾನ ಮತ್ತು ಕಿರುಕುಳದ ಕೃತ್ಯಗಳನ್ನು ತಡೆಯಲು ಎಸ್ಸಿ/ಎಸ್ಟಿ ಕಾಯ್ದೆಯನ್ನು ನಿರ್ದಿಷ್ಟವಾಗಿ ಜಾರಿಗೆ ತರಲಾಗಿದೆ. ಎಸ್ಸಿ/ಎಸ್ಟಿ ಕಾಯ್ದೆಯು ಹಲವಾರು ಕ್ರಮಗಳನ್ನು ಕೈಗೊಂಡಿದ್ದರೂ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ಮೇಲ್ಜಾತಿಗಳ ವಿವಿಧ ದೌರ್ಜನ್ಯಗಳಿಗೆ ಒಳಗಾಗುತ್ತಿವೆ ಎಂಬ ನಿರಾಶಾದಾಯಕ ವಾಸ್ತವವನ್ನು ಗುರುತಿಸುತ್ತದೆ. ಈ ದುರ್ಬಲ ಸಮುದಾಯಗಳ ಸದಸ್ಯರನ್ನು ರಕ್ಷಿಸುವ ಮತ್ತು ಜಾತಿ ಆಧಾರಿತ ದೌರ್ಜನ್ಯಗಳಿಗೆ ಬಲಿಯಾದವರಿಗೆ ಪರಿಹಾರ ಮತ್ತು ಪುನರ್ವಸತಿ ಒದಗಿಸುವ ಅವಳಿ ಉದ್ದೇಶದೊಂದಿಗೆ, ಸಂವಿಧಾನದ 15, 17 ಮತ್ತು 21ನೇ ವಿಧಿಗಳಲ್ಲಿ ನಮೂದಿಸಲಾಗಿರುವ ವ್ಯಕ್ತಪಡಿಸಿರುವ ಸಾಂವಿಧಾನಿಕ ರಕ್ಷಣೆಗಳನ್ನು ಗಮನದಲ್ಲಿಟ್ಟುಕೊಂಡು ಎಸ್ಸಿ/ಎಸ್ಟಿ ಕಾಯ್ದೆಯನ್ನು ಜಾರಿಗೆ ತರಲಾಗಿದೆ ಎಂಬ ಅಂಶವನ್ನು ನ್ಯಾಯಾಲಯಗಳು ನೆನಪಿನಲ್ಲಿಟ್ಟುಕೊಳ್ಳಬೇಕು.

16. ಮತ್ತೊಂದೆಡೆ, ಎಸ್ಸಿ/ಎಸ್ಟಿ ಕಾಯ್ದೆಯ ವ್ಯಾಪ್ತಿಗೆ ಒಳಪಟ್ಟಿರುವ ಅಪರಾಧವು ಪ್ರಾಥಮಿಕವಾಗಿ ಸಿವಿಲ್ ಅಥವಾ ಖಾಸಗಿಯಾಗಿದೆ ಎಂದು ನ್ಯಾಯಾಲಯಕ್ಕೆ ಕಂಡುಬಂದರೆ, ಅಲ್ಲಿ ಆಪಾದಿತ ಅಪರಾಧವನ್ನು ಬಲಿಪಶುವಿನ ಜಾತಿಯ ಕಾರಣದಿಂದಾಗಿ ಮಾಡಲಾಗಿಲ್ಲ, ಅಥವಾ ಕಾನೂನು ಬದ್ಧ ಪ್ರಕ್ರಿಯೆಗಳ ಮುಂದುವರಿಕೆಯು ಕಾನೂನಿನ ಪ್ರಕ್ರಿಯೆಯ ದುರುಪಯೋಗವಾಗಬಹುದಾದರೆ, ನ್ಯಾಯಾಲಯವು ವ್ಯವಹರಣೆಗಳನ್ನು ರದ್ದು ಮಾಡುವ ತನ್ನ ಅಧಿಕಾರ ಚಲಾಯಿಸಬಹುದು ಹಾಗೂ ಆದೇಶವನ್ನು ಮಾಡಬಹುದು. ಇದೇ ರೀತಿಯಲ್ಲಿ, ರಾಜಿ / ಇತ್ಯರ್ಥದ ಆಧಾರದ ಮೇಲೆ ಪ್ರಕರಣ ರದ್ದುಗೊಳಿಸುವ ಮನವಿಯನ್ನು ಪರಿಗಣಿಸುವಾಗ, ಎಸ್ಸಿ/ಎಸ್ಟಿ ಕಾಯ್ದೆಯ ಆಧಾರವಾಗಿರುವ ಉದ್ದೇಶವನ್ನು ಉಲ್ಲಂಘಿಸಲಾಗುವುದಿಲ್ಲ ಅಥವಾ ಕಡಿಮೆ ಮಾಡಲಾಗುವುದಿಲ್ಲ ಎಂದು ನ್ಯಾಯಾಲಯಕ್ಕೆ ಮನದಟ್ಟಾದರೆ, ಆ ಅಪರಾಧದ ಶಿಕ್ಷೆಗೆ ಒಳಗಾಗದಿದ್ದರೂ ಸಹ, ಆ ಅಪರಾಧ 'ವಿಶೇಷ ಶಾಸನ' ದ ವ್ಯಾಪ್ತಿಗೆ ಬರುತ್ತದೆ ಎಂಬ ಕೇವಲ ಸಂಗತಿಯು ಈ ನ್ಯಾಯಾಲಯವನ್ನು ಅಥವಾ ಉಚ್ಚ ನ್ಯಾಯಾಲಯವನ್ನು ಸಂವಿಧಾನದ

ಅನುಚ್ಛೇದ 142 ಅಥವಾ ಸಿ.ಆರ್.ಪಿ.ಸಿ ಕಲಂ 482ರ ಅಡಿಯಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸುವುದನ್ನು ತಡೆಯುವುದಿಲ್ಲ."

(ಒತ್ತುನೀಡಲಾಗಿದೆ)

35. ಎದುರುದಾರಗಳ ಪರವಾಗಿ ವಿದ್ವಾಂಸ ವಕೀಲರು ಉಲ್ಲೇಖಿಸಿದ ಪೂರ್ವ ನಿದರ್ಶನಗಳನ್ನು ನಾವು ಬಹು ಸೂಕ್ಷ್ಮವಾಗಿ ಪರಿಗಣಿಸಿದ್ದೇವೆ ಮತ್ತು ಅವು ಇಲ್ಲಿನ ವಾಸ್ತವಿಕ ಸನ್ನಿವೇಶಕ್ಕೆ ಅಸಮಂಜಸವಾಗಿವೆ ಎಂಬ ಅಭಿಪ್ರಾಯವನ್ನು ಹೊಂದಿದ್ದೇವೆ. ಅದರಲ್ಲಿ ಮಂಡಿಸಲಾದ ಪ್ರಸ್ತಾಪಗಳು ಮೇಲ್ಮನವಿದಾರನ ಪರವಾಗಿಲ್ಲದಿದ್ದರೂ, ಅವು ಪ್ರಸ್ತುತ ಮೇಲ್ಮನವಿದಾರನ ಹೇಳಿಕೆಗೆ ಪೂರ್ವಾಗ್ರಹವನ್ನು ಉಂಟುಮಾಡುವುದಿಲ್ಲ ಎಂದು ಹೇಳುವುದು ಸಾಕಾಗುತ್ತದೆ. ತಪನ್ ಕುಮಾರ್ ಸಿಂಗ್ (ಮೇಲೆ ಹೇಳಲಾದ) ಮತ್ತು ನರೇಶ್ (ಮೇಲೆ ಹೇಳಲಾದ) ಪ್ರಕರಣದ ತೀರ್ಪುಗಳಲ್ಲಿ ಎಫ್ಐಆರ್ ವಿವರವಾದದ್ದಾಗಿರಬೇಕಾಗಿಲ್ಲಎಂದು ಸೂಚಿಸಿರುತ್ತಾರೆ, ಏಕೆಂದರೆ ಇದು ತನಿಖಾ ಪ್ರಕ್ರಿಯೆನ್ನು ಪ್ರಾರಂಭಿಸಲು ಮಾತ್ರ ಮತ್ತು ಪೊಲೀಸರಿಗೆ ಸಾಮಾನ್ಯವಾಗಿ ತನಿಖೆ ನಡೆಸಲು ಅವಕಾಶ ನೀಡಬೇಕು. ಇದು ಸಾಮಾನ್ಯ ನಿಯಮವಾಗಿದೆ. ಆದರೆ ಸೂಕ್ತವಾದ ಪ್ರಕರಣದಲ್ಲಿ ಈ ನ್ಯಾಯಾಲಯ ಅಥವಾ ಉಚ್ಚನ್ಯಾಯಾಲಯಕ್ಕೆ ಇದರ ನಿರ್ಬಂಧವಲ್ಲ.

36. ಈ ಅಸ್ತಿತ್ವದಲ್ಲಿರುವ ಪ್ರಕರಣದ ಕುರಿತು - ಕಾನೂನಿನಿಂದ ಸ್ಪಷ್ಟವಾದ ಸಂಗತಿಯೆಂದರೆ, ಈ ನ್ಯಾಯಾಲಯವು ಭೂಮಿ ಮತ್ತು / ಅಥವಾ ಹಣಕ್ಕೆ ಸಂಬಂಧಿಸಿದ ಸಂಪೂರ್ಣವಾಗಿ ಸಿವಿಲ್ ವಿವಾದಗಳಿಗೆ ಅಪರಾಧದ ಬಣ್ಣವನ್ನು ನೀಡಲಾಗುತ್ತಿರುವಂತಹ ಪ್ರಕರಣಗಳಲ್ಲಿ ಮಧ್ಯಪ್ರವೇಶಿಸು ದರಲ್ಲಿ ಬಹುತೇಕ ಸ್ಥಿರವಾಗಿದೆ. ಕೇವಲ ಸಂಬಂಧಿತ ಪಕ್ಷಗಾರನ ಮೇಲೆ ನ್ಯಾಯಾಂಗೇತರ ಒತ್ತಡವನ್ನು ಹೇರುವ ಉದ್ದೇಶಕ್ಕಾಗಿ ಮಾಡಿರುವ ಇದು ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗವಲ್ಲದೆ ಬೇರೇನೂ ಅಲ್ಲ ಎಂದು ನಾವು ಪುನರುಚ್ಚರಿಸುತ್ತೇವೆ. ಪ್ರಸ್ತುತ ಪ್ರಕರಣದಲ್ಲಿ, ಪ್ರಶ್ನಾರ್ಹವಾದ ಭೂಮಿಯ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ವಿವಾದವನ್ನು ಪ್ರಾರಂಭಿಸುವಲ್ಲಿ 60 ವರ್ಷಗಳಷ್ಟು ದೊಡ್ಡ ಮತ್ತು ಸ್ಪಷ್ಟವಾಗಿ ವಿವರಿಸಲಾಗದ ವಿಳಂಬವಿದೆ ಮತ್ತು ಸಿವಿಲ್ ಮೊಕದ್ದಮೆಗಳಲ್ಲಿ ಎದುರುದಾರ ಪರಿಹಾರ ಪಡೆಯಲು ವಿಫಲವಾದ ನಂತರವೇ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲಾಗಿದೆ, ಜೊತೆಗೆ ಮಧ್ಯಂತರ ಪರಿಹಾರವೂ ಕೂಡಾ 2ನೇ ಎದುರುದಾರ / ಆಕೆಯ ಕುಟುಂಬ ಸದಸ್ಯರಿಗೆ ನಿರಾಕರಣೆಯಾಗಿದೆ. ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯದಲ್ಲಿ, ಪರೋಕ್ಷ ಉದ್ದೇಶಗಳೊಂದಿಗೆ, ಪರೋಕ್ಷ ಕಾರಣಗಳಿಗಾಗಿ ಮತ್ತು ಪ್ರತೀಕಾರದ ಸ್ಪಷ್ಟ ಉದ್ದೇಶದಿಂದ ಕ್ರಿಮಿನಲ್ ಮೊಕದ್ದಮೆಗೆ ಶರಣುಹೋಗಿದ್ದಾರೆ ಎಂಬುದು ಸ್ಪಷ್ಟವಾಗಿದೆ.

37. ಆರೋಪಗಳನ್ನು ಅವುಗಳ ಮುಖಬೆಲೆಯ ಮೇಲೆ ನಿಜವೆಂದು ಪರಿಗಣಿಸಿದರೂ, ಮೇಲ್ಮನವಿದಾರರು ಎಸ್ಸಿ/ಎಸ್ಟಿ ಕಾಯ್ದೆಯಡಿ ಯಾವುದೇ ಅಪರಾಧವನ್ನು ಮಾಡಿದ್ದಾರೆ ಎಂದು ಹೇಳಲಾಗುವುದಿಲ್ಲ ಎಂಬುದನ್ನು ನ್ಯಾಯಾಲಯವು

ಗಮನಿಸುತ್ತದೆ. ದೂರು ಮತ್ತು ಎಫ್ಐಆರ್ ಗಳು ಕ್ಷುಲ್ಲಕ, ನೋವಿನ ಮತ್ತು ದಬ್ಬಾಳಿಕೆಯದ್ದಾಗಿ .

38. ಯಾವುದೇ ದೂರಿನ ಆಧಾರದ ಮೇಲೆ ಎಫ್.ಐ.ಆರ್. ಅನ್ನು ದಾಖಲಿಸುವ ಅಧಿಕಾರಿಗಳು, ಎಸ್ಸಿ/ಎಸ್ಟಿ ಕಾಯ್ದೆಯಂತಹ ಅತ್ಯಂತ ಕಠಿಣವಾದ ಕಾನೂನಿನ ಯಾವುದೇ ನಿಬಂಧನೆಯನ್ನು ಅನ್ವಯಿಸುವ ಮೊದಲು ಜಾಗರೂಕರಾಗಿರಲು ಕರ್ತವ್ಯಬದ್ಧರಾಗಿದ್ದಾರೆ ಎಂದು ಈ ನ್ಯಾಯಾಲಯವು ಸೂಚಿಸುತ್ತದೆ, ಇದು ಸಂಬಂಧಿತ ಆರೋಪಿ ಮೇಲೆ ಗಂಭೀರ ದಂಡನೆಯನ್ನು ವಿಧಿಸುತ್ತದೆ. ತಾನು ಆಹ್ವಾನಿಸಲು ಬಯಸುವ ನಿಬಂಧನೆಗಳು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುತ್ತವೆ ಎಂದು ಅಧಿಕಾರಿಗೆ ಮನವರಿಕೆಯಾಗಬೇಕು. ನಮ್ಮ ಹೇಳಿಕೆಗಳು, ಯಾವುದೇ ರೀತಿಯಲ್ಲಿ, ವಿಶೇಷ / ಕಠಿಣ ಕಾನೂನುಗಳ ಅನ್ವಯವನ್ನು ದುರ್ಬಲಗೊಳಿಸುವುದಿಲ್ಲ ಎಂದು ನಾವು ಸ್ಪಷ್ಟಪಡಿಸುತ್ತೇವೆ, ಆದರೆ ಕಾನೂನನ್ನು ಯಾಂತ್ರಿಕವಾಗಿ ಅನ್ವಯಿಸದಂತೆ ಪೊಲೀಸರಿಗೆ ನೆನಪಿಸಲು ಮಾತ್ರ, ವಾಸ್ತವಿಕ ನಿಲುವನ್ನು ಉಲ್ಲೇಖಿಸುತ್ತೇವೆ.

39. ಮೇಲಿನ ಕಾರಣಗಳಿಗಾಗಿ, ಎಫ್.ಐ.ಆರ್. ರದ್ದು ಮಾಡದೇ ಸಂಹಿತೆ ಕಲಂ 482ರ ಅಡಿಯಲ್ಲಿ ತನ್ನ ಸಂಪೂರ್ಣ ಅಧಿಕಾರವನ್ನು ಚಲಾಯಿಸದೇ ಇರುವುದು ಹೈಕೋರ್ಟಿನಿಂದ ತಪ್ಪಾಗಿದೆ ಎಂದು ಈ ನ್ಯಾಯಾಲಯವು ಕಂಡು ಹಿಡಿದಿದೆ. ತದನುಸಾರವಾಗಿ, ಆಕ್ಷೇಪಾರ್ಹ ತೀರ್ಪನ್ನು, ಕಾನೂನಿನಲ್ಲಿ ಒಪ್ಪಲಾಗದ ಕಾರಣ, ತಳ್ಳಿಹಾಕಲಾಗಿದೆ. ಅದರ ಪರಿಣಾಮವಾಗಿ, ಮೇಲ್ಮನವಿದಾರದಾರನಿಗೆ ಸಂಬಂಧಿಸಿದಂತೆ, ಎಫ್ಐಆರ್ ಮತ್ತು ಅದರಿಂದ ಹೊರ ಹೊಮ್ಮುವ ಯಾವುದೇ ವ್ಯವಹರಣೆಗಳನ್ನು ರದ್ದುಗೊಳಿಸಲಾಗಿದೆ.

40. ಅಂತೆಯೇ, ವೆಚ್ಚಗಳ ಬಗ್ಗೆ ಯಾವುದೇ ಆದೇಶವಿಲ್ಲದೇ ಈ ಮೇಲ್ಮನವಿಯನ್ನು ಪುರಸ್ಕರಿಸಲಾಗಿದೆ. ಬಾಕಿ ಇರುವ ಅರ್ಜಿಗಳನ್ನು ಕಡತವಿಬಾಗಕ್ಕೆ ಸಲ್ಲಿಸತಕ್ಕದ್ದು.

ಮೇಲ್ಮನವಿಯನ್ನು ಪುರಸ್ಕರಿಸಲಾಗಿದೆ.

(ದಿವ್ಯಾ ಪಾಂಡೆ; ಸಹಾಯಮಾಡಿದವರುಃ ಮಯಾಂಕ್ ಬಾತ್ರಾ, ಎಲ್ ಸಿ ಆರ್ ಏ)